ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ
Chilume Circulated in and around 10 countries

ಸಂಪುಟ ೩, ಸಂಚಿಕೆ ೧೦,ಮಾರ್ಚ್ ೨೦೧೬

Find us on: facebook®

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧
ಸಿಡ್ನಿ ಸುದ್ದಿಗಳು ... ಪು. ೨
ಆಗ್ನೆಸ್ – ಲೇಖನ ... ಪು. ೪

ಚಿಲುಮೆಯ ಒಳಗೆ

ಆರೋಗ್ಯ ... ಪು. ೬
ರಾಂ ರಾಮ ... ಪು. ೯
ವಿಚಾರ-ವಿಹಾರ ... ಪು. ೧೧

ಚಿಲುಮೆಯ ಒಳಗೆ

ಕಥಾಚಿಲುಮೆ ... ಪು. ೧೩
ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೪
ಪದ ಪುಂಜ/ರಂಗೋಲಿ ... ಪು. ೧೫

ಚಿಲುಮೆಯ ಒಳಗೆ

ಶಾಯರಿ ... ಪು. ೧೬
ಅತ್ತೆಯ ರೆಸಿಪಿ (ಹಾಸ್ಯ) ... ಪು. ೧೭

ಚಿಲುಮೆಯ ಒಳಗೆ

ಪ್ರಾಮಾಣಿಕತೆ (ಕಥೆ) ... ಪು. ೧೮
ವಿಜ್ಞಾನ , ಅಲ್ಲಲ್ಲಿ ಏನೇನು ... ಪು. ೨೧

ಆರೋಗ್ಯದಂಕಣ – ಅರಿಸಿನ
ಪುಟ ೬

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಮಾರ್ಚ್ ಬಂದೇಬಿಟ್ಟಿತು. ವರ್ಷದ ಮೂರು ತಿಂಗಳು ಮುಗಿಯಹತ್ತಿತು. ಕಾಲವನ್ನು ಹಿಡಿಯೋರು ಯಾರೂ ಇಲ್ಲವೆನ್ನುವುದು ಲೋಕಕ್ಕೆ ತಿಳಿದ ವಿಷಯ. ಅದರ ಬಗ್ಗೆ ಚರ್ಚೆ ಬೇಕೆ? ಖಂಡಿತ ಇಲ್ಲ. ಆದರೆ ಕಳೆಯುತ್ತಿರುವ ಆ ಸಮಯದ ಜೊತೆಗೆ ಇನ್ನೇನನ್ನು ನಾವು ಕಳೆದುಕೊಳ್ಳುತ್ತಿದ್ದೀವಿ, ನಮ್ಮನ್ನು ಏನೇನು ಬಿಟ್ಟು ಹೋಗುತ್ತಿದೆ ಎನ್ನುವುದರ ಬಗೆಗಿನ ಆಲೋಚನೆ ಖಂಡಿತವಾಗಿಯೂ ನಮ್ಮೆಲ್ಲರಲ್ಲೂ ಇರಬೇಕು.

ನಮ್ಮ ಬಾಲ್ಯವನ್ನು ನೆನಪಿಸಿಕೊಂಡು, "ಆಹಾ! ಅದೆಂತಹ ಸುಂದರ ದಿನಗಳು", ಈಗ ಕಾಲ ಕೆಟ್ಟುಹೋಯಿತು ಎನ್ನುವುದು ಮುಖ್ಯವಾಗದೇ, ಅಂತಹ ಸುಂದರ ದಿನಗಳನ್ನು ನಮ್ಮ ಮಕ್ಕಳಿಗೂ ಸಿಗುವಂತೆ ನೋಡಿಕೊಳ್ಳುವುದು ನಮ್ಮ ಬದುಕಿಗೆ ಅರ್ಥವನ್ನು ಒದಗಿಸುತ್ತದೆ. ಈ ನಿಟ್ಟಿನಲ್ಲಿ "ತಾಯಿಯೇ ಮೊದಲ ಗುರು" ವೆನ್ನುವ ಆ ಧೀಮಂತ ವಾಕ್ಯವು, ಪಾಲಕರಲ್ಲಿ ಸದಾ ಜಾಗೃತವಾಗಿರಬೇಕಾದ ಗುರುತರವಾದ ಜವಾಬ್ದಾರಿಯನ್ನು ನೆನಪಿಸುತ್ತದೆ.

ಮಮತೆ, ಸಹನೆ, ವಾತ್ಸಲ್ಯಭಾವಗಳನ್ನು ಸ್ತ್ರೀಯರಲ್ಲಿ ಸಹಜವಾಗಿ ಕಾಣುವ ಗುಣವೆಂದು ನಾವೆಲ್ಲ ತಿಳಿದಿರುತ್ತೀವಿ. ಅದವರ ವಿಶೇಷಣವೇ ಸರಿ. ಮಾತೃರೂಪಿಯಾದ ಭೂಮಿಯು ತನ್ನ ಸಹಜ ಪ್ರಕೃತಿಯಿಂದ ಶೋಭಿಸುವಾಗ, ಆ ರಮ್ಯತೆಯನ್ನು ಆರಾಧಿಸದವರಾರು. ಆದರೆ ಅದೇ ಭೂಮಿಗೆ ತೊಂದರೆಯಾಗುತ್ತಿರುವಾಗಿ ಸುಮ್ಮನೆ ಕೈಕಟ್ಟಿ ಕುಳಿತುಕೊಂಡರೆ, ತೊಂದರೆ ನಮಗೂ ಕೂಡ "ಕಟ್ಟಿಟ್ಟದ್ದು" ಎನ್ನುವುದನ್ನು ಮರೆಯಬಾರದು. ಭೂಮಿತಾಯಿಯ ಮೇಲೆ ಆಗುತ್ತಿರುವ ತಪ್ಪುಗಳನ್ನು ನಿಲ್ಲಿಸಿದಷ್ಟೂ ನಮಗೇ ಒಳಿತಿದೆ. ಅದಕ್ಕಾಗಿ ಯಾವುದೇ ಆಚರಣೆಗೆ ಸೀಮಿತಗೊಳಿಸದೇ ಅನುದಿನವೂ ಜಾಗೃತವಾಗಿರುವ ಆಂದೋಲನವೇಳಬೇಕು ನಮ್ಮ ಮನಗಳಲ್ಲಿ.

ಪುಟ್ಟ ಪುಟ್ಟ ಕೆಲಸಗಳಿಂದ ದೊಡ್ಡ ದೊಡ್ಡ ಕಾರ್ಯಗಳು ಸಾಧ್ಯ. ಪರಿಸರದ ಕಾಳಜಿಯಿಟ್ಟುಕೊಂಡು ನಾವು ಬದುಕುವುದಕ್ಕೆ ಶುರು ಮಾಡಬೇಕಷ್ಟೆ. ಆಸ್ಟ್ರೇಲಿಯನ್ ಬ್ಯೂರೋ ಆಫ್ ಸ್ಟ್ಯಾಟಿಸ್ಟಿಕ್ಸ್ – ಈ ಸಂಸ್ಥೆಯಿಂದ ಲಭ್ಯವಿರುವ ಮಾಹಿತಿಯಂತೆ ೨೦೦೭ ರಲ್ಲಿ (ಈಗ ಇನ್ನೂ ಹೆಚ್ಚಿರುತ್ತದೆ), ಆಸ್ಟ್ರೇಲಿಯಾದಲ್ಲಿ ಉತ್ಪತ್ತಿಯಾಗುವ ವಾರ್ಷಿಕ ಕಸಕ್ಕೆ ತಲಾ ಒಬ್ಬ ವ್ಯಕ್ತಿಯಿಂದ ಸರಾಸರಿ ೨ ಟನ್ನಿನಷ್ಟು ಕೊಡುಗೆ ಎಂದು ಗೊತ್ತಾಗುತ್ತದೆ. ಅಂದರೆ ಒಂದು ವರ್ಷಕ್ಕೆ ೨೦೦೦ ಕೆ.ಜಿ.ಗಳಷ್ಟು ಕಸವನ್ನು ನಮ್ಮ ಜೀವನಶೈಲಿಯಿಂದ ನೀಡುತ್ತಿದ್ದೀವಿಯೆಂದರೆ ಇದು ಯೋಚಿಸಬೇಕಾದ ವಿಷಯವಲ್ಲವೇ. ಪ್ರಪಂಚದ ಬಹುತೇಕ ಎಲ್ಲ ದೇಶಗಳಲ್ಲೂ ಇದೇ ವ್ಯಥೆಯಿದೆ.

ಹೊರನಾಡ ಚೆಲುಮೆಯಿಂದ ಒಂದು ಪುಟ್ಟ ಮನವಿ. ಪ್ರಕೃತಿಗೆ ಹಾನಿಕಾರಕವೆಂದು ಸೂಚಿಸಲ್ಪಟ್ಟಿರುವ ವಸ್ತುಗಳನ್ನು ಕಡಿಮೆ ಮಾಡುತ್ತಾ ಬನ್ನಿ. ನಿಮಗೂ ಒಳಿತೂ. ಭುವಿಗೂ ಒಳಿತು. "ಮರಗಿಡ ಹೂ ಮುಂಗುರುಳನು, ತಂಗಾಳಿಯ ಬೆರಳ ಸವರಿ, ಹಕ್ಕಿ ಗಿಲಕಿ ಹಿಡಿಸಿದಾಕೆ" – ಸ್ತ್ರೀ ಅಂದರೆ ಅಷ್ಟೇ ಸಾಕಾಗದು. ಈ ಸ್ತ್ರೀಯನ್ನು ಚೆನ್ನಾಗಿ ನೋಡಿಕೊಳ್ಳಬೇಕು. ನೋಡಿಕೊಳ್ಳೋಣ. ▪

ಎರಡು ತಿಂಗಳ ಪ್ರಮುಖ ದಿನಗಳು

ಮಾರ್ಚ್ ಶ್ರೀ ಮನ್ಮಥ ನಾಮ ಸಂವತ್ಸರ, ಉತ್ತರಾಯಣ,
ಶಿಶಿರ ಋತು, ಮಾಘ/ಫಾಲ್ಗುಣ ಮಾಸ

05 ಶ – ವಿಜಯಾ ಏಕಾದಶಿ
07 ಸೋ - ಮಹಾಶಿವರಾತ್ರಿ
08 ಭಾ - ಅಂ ರಾ ಮಹಿಳಾ ದಿನ, 09 ಬು – ಅಮಾವಾಸ್ಯೆ/ ಚಂದ್ರ ಗ್ರಹಣ
10 ಗು - ಫಾಲ್ಗುಣ ಮಾಸ ಆರಂಭ/ಶ್ರೀ ರಾಮಕೃಷ್ಣ ಪರಮಹಂಸ ಜಯಂತಿ
19 ಶ ಅಮಲಕೀ ಏಕಾದಶಿ
23 ಬು - ಹೋಳಿ ಹಬ್ಬ, ಹೋಳಿ ಹುಣ್ಣಿಮೆ
25 ಶು - ಗುಡ್ ಫ್ರೈಡೆ
26 ಶ - ಹೋಲಿ ಸಾಟರ್ಡೇ 27 ಭಾ - ಈಸ್ಟರ್ ಸಂಡೇ
27 ಭಾ - ಸಂಕಷ್ಟ ಚತುರ್ಥಿ /ವಿಶ್ವ ರಂಗಭೂಮಿ ದಿನ

ಎಪ್ರಿಲ್ ಶ್ರೀ ಮನ್ಮಥ/ದುರ್ಮುಖಿ ನಾಮ ಸಂವತ್ಸರ,
ಉತ್ತರಾಯಣ, ಶಿಶಿರ/ವಸಂತ ಋತು, ಫಾಲ್ಗುಣ/ಚೈತ್ರ ಮಾಸ

03 ಭಾ - ಪಾಪಮೋಚಿನಿ ಏಕಾದಶಿ
08 ಶು - ಚಾಂದ್ರಮಾನ ಯುಗಾದಿ, ಚೈತ್ರ ಮಾಸ, ವಸಂತ ಋತು, ಶ್ರೀ ದುರ್ಮುಖಿ ನಾಮ ಸಂವತ್ಸರ ಆರಂಭ
12 ಮಂ - ದೇವರ ದಾಸಿಮಯ್ಯ ಜಯಂತಿ, 14 ಗು – ಅಂಬೇಡ್ಕರ್ ಜಯಂತಿ/ ಸೌರ ಯುಗಾದಿ, 15 ಶು - ಶ್ರೀ ರಾಮ ನವಮಿ, 17 - ಕಾಮದಾ ಏಕಾದಶಿ,
19 ಮಂ - ಮಹಾವೀರ ಜಯಂತಿ,
21 ಗು - ಹಜರತ್ ಆಲಿ ಜನ್ಮ ದಿನ/ಚತುರ್ಥಿ-ಹುಣ್ಣಿಮೆ
22 ಶು - ಬೆಂ ಕರಗ/ಚೆತ್ರಾ ಪೂರ್ಣಿಮಾ/ಅಕ್ಕಮಹಾದೇವಿ ಜಯಂತಿ
25 ಸೋ - ಸಂಕಷ್ಟ ಚತುರ್ಥಿ

ಪುರಂದರ ದಾಸರ ಆರಾಧನೆ

ಕನಕಾಪುರ ನಾರಾಯಣ

ಪುರಂದರ ದಾಸರ ಒಂದು ಹಾಡು ಕೇಳಿ ಜರ್ಮನಿಯಲ್ಲಿಂದ ಓರ್ವಪ್ರಜೆ ಭಾರತ, ಬಾಂಗ್ಲಾ ಎಲ್ಲಾ ಸುತ್ತಾಡಿ ಕಡೆಗೆ ಚೆನ್ನೈಗೆ ಬಂದು ಅಲ್ಲಿ, ಇದು ಯಾವ ಭಾಷೆ? ಎನ್ನುವುದನ್ನು ತಿಳಿಯುವುದೇ ಒಂದು ಸಾಹಸವಾಗಿ ಅಲ್ಲಿಂದ ನೇರ ಬೆಂಗಳೂರಿಗೆ ಬಂದು ಶ್ರೀ ವಿದ್ಯಾಭೂಷಣರನ್ನು ಭೇಟಿಮಾಡಿ ಮತ್ತೆ ಆ ಹಾಡನ್ನು ಆಲಿಸಿ ಆನಂದಿಸಿದ ಘಟನೆ ಕೆಲವೇ ವರ್ಷಗಳ ಹಿಂದೆ ಕೇಳಿದ್ದೆವು. ದಾಸರ ಹಾಡು ಅದೆಷ್ಟು ಮೋಡಿ ಮಾಡಿತ್ತು ಆ ಕೇಳುಗನನ್ನು ಎಂದು ಊಹಿಸಬಹುದೇ?

ಸಿಡ್ನಿಯಲ್ಲಿ ಹತ್ತಾರು ವರ್ಷಗಳಿಂದ ನಡೆಯುತ್ತಿರುವ ಪುರಂದರ ಆರಾಧನೆ ಪ್ರತಿವರ್ಷದಂತೆ ಈ ವರ್ಷವೂ ನಡೆಯಿತು ಅನ್ನುವ ಮಾತು ಸುಳ್ಳಾಗುತ್ತಾ ಬರುತ್ತಿದೆ, ಆತಂಕ ಪಡುವ ವಿಷಯವಲ್ಲ ಇದು. ಹಿಂದಿನ ಎಲ್ಲಾ ಆರಾಧನೆಗಿಂತಲೂ ವಿಭಿನ್ನ ಮತ್ತು ಉತ್ತಮ ಗುಣಮಟ್ಟದ್ದಾಗಿ ಕಂಡಿತು. ಅತ್ಯುತ್ತಮ ಹಾಡುಗಳ ಆಯ್ಕೆ, ವಿಷಯ ಆಧಾರಿತವಾದ ಕೀರ್ತನೆಗಳ ಸಂಯೋಜನೆ, ಸೊಗಸಾದ ಗಾಯಕರ ಸಮೂಹಗಳು, ಇಂಪಾದ ಸಂಗೀತ ವಾದ್ಯಗಳು, ಎಲ್ಲದಕ್ಕಿಂತ ಹೆಚ್ಚಾಗಿ ಒಳ್ಳೆಯ ಗುಣಮಟ್ಟದ ಧ್ವನಿವರ್ಧಕ. ಇವೆಲ್ಲವೂ ಇಷ್ಟುಬೇಗ ಮುಗಿಯಿತೇ ಎನ್ನುವಷ್ಟರಲ್ಲಿ ರುಚಿಕರವಾದ ಭೋಜನದ ಏರ್ಪಾಡು. ಶ್ರೀಮತಿ ಚಂದ್ರಿಕಾ ಸುಬ್ರಹ್ಮಣ್ಯಂ ಮತ್ತು ಶ್ರೀಯುತ ಗಿರಿಧರ್ ಕುಟುಂಬದವರ ಶ್ರಮ ಮೆಚ್ಚುವಂಥದ್ದೇ.

ಶ್ರೀಮತಿ ಲಕ್ಷ್ಮೀ ಅಭಿಷೇಕ್ ಅವರ "ನವರಸ" ಎನ್ನುವ ಈ ವರ್ಷದ ವಿಷಯದ ಬಗ್ಗೆ ನೀಡಿದ ಉಲ್ಲೇಖ ಇಂಗ್ಲೀಷಿನಲ್ಲಿದ್ದರೂ ತುಂಬಾ ಸೊಗಸಾಗಿತ್ತು. ಪ್ರತಿ ಹಾಡಿನ ಮೊದಲು, ಆಯಾ ರಸಗಳ ವಿವರಣೆ ನೀಡುತ್ತಾ ಶೃಂಗಾರ, ಹಾಸ್ಯ, ಅದ್ಭುತ, ಶಾಂತ, ರುದ್ರ, ವೀರ, ಕರುಣ, ಭಯಾನಕ ಮತ್ತು ಭೀಭತ್ಸ ರಸವನ್ನು ಆಧರಿಸಿದ ಹಾಡುಗಳು ಒಂದೊಂದಾಗಿ ಕೇಳುಗರ ಕಿವಿ ಇಂಪಾಗುವುದರ ಜೊತೆಗೆ ಮನಸ್ಸಿಗೂ ಆಧ್ಯಾತ್ಮದ ಚಿಂತನೆಯ ಸಿಂಚನದ ಅನುಭವ ನೀಡಿತು. ಸಂಗೀತ ಪಿತಾಮಹ ಶ್ರೀಪುರಂದರ ದಾಸರು ಐನೂರು ವರ್ಷಕ್ಕೂ ಹಿಂದೆ ರಚಿಸಿದ ಪಿಳ್ಳಾರಿ ಗೀತೆಗಳು ಮತ್ತು ಆಯ್ದ ಒಂಭತ್ತು ಮುತ್ತುಗಳ ಗಾನಸರಮಾಲೆ "ನವರತ್ನಮಾಲಿಕೆ" ವಾದ್ಯವೃಂದದ ಸಮೇತ ಮೂವತ್ತಕ್ಕೂ ಹೆಚ್ಚು ಗಾಯಕ ಗಾಯಕಿಯರ ಸಮೂಹದಲ್ಲಿ ಹಾಡಿದ ಒಂಭತ್ತು ಹಾಡುಗಳಿಂದ ನಾಂದಿಯಾಯಿತು ಕಾರ್ಯಕ್ರಮ.ಇದಾದ ನಂತರ ಮಕ್ಕಳು ಹಾಡಿದ ವಂದಿಸುವುದಾದಿಯಲಿ ಗಣನಾಥನಾ, ಹರಿನಾರಾಯಣ, ಕಂಡೆನಾ ಗೋವಿಂದನಾ ಮತ್ತು ತಾರಮ್ಮಯ್ಯ ಕೇಳಲು ಚೆನ್ನಾಗಿತ್ತು. ಪುಟ್ಟ ಮಕ್ಕಳು ರೇಷಿಮೆ ಲಂಗ-ಕುಪ್ಪಸತೊಟ್ಟು ಎಲ್ಲೆಡೆ ಓಡಾಡುವುದೇ ನೋಡಲು ಚೆನ್ನಿತ್ತು.

ಶೃಂಗಾರ ರಸಕ್ಕೆ- ಆಡಿಸಿದಳೆಶೋಧೆ, ಹಾಸ್ಯರಸಕ್ಕೆ- ಅಜ್ಞಾನಿಗಳ ಕೂಡ, ಅದ್ಭುತರಸಕ್ಕೆ- ಅಲ್ಲಿ ನೋಡಲು ರಾಮ, ಶಾಂತರಸಕ್ಕೆ- ಭಾಗ್ಯದ ಲಕ್ಷ್ಮೀ, ರುದ್ರರಸಕ್ಕೆ- ಕೇಳನೋ ಹರಿತಾಳನೋ, ವೀರರಸಕ್ಕೆ- ವೀರಹನುಮ, ಕರುಣಾರಸಕ್ಕೆ- ತಿರುಪತಿವೆಂಕಟ ರಮಣ ಮತ್ತು ಕರುಣಿಸೋ ರಂಗ , ಭಯಾನಕರಸಕ್ಕೆ- ಅಂಜಿಕಿನ್ಯಾತಕೋ ಮತ್ತು ಭೀಭತ್ಸರಸಕ್ಕೆ- ಹನುಮಂತ ದೇವ ಹೀಗೆ ಆಯಾರಸಕ್ಕೆ ತಕ್ಕ ಹಾಡುಗಳನ್ನು ಹಾಡಿ ಮನತಣಿಸಿದರು.

ರುಚಿಕರ ಊಟದೊಂದಿಗೆ ಅಂತ್ಯಗೊಂಡ ಅಚ್ಚುಕಟ್ಟಾದ ಈ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಲು ಕಾರಣರಾದ ಎಲ್ಲ ಕಲಾವಿದರು ಮತ್ತು ಕಾರ್ಯಕಾರಿ ಸಮಿತಿಯವರಿಗೆಲ್ಲಾ ಈ ಮೂಲಕ ಮತ್ತೊಮ್ಮೆ ಅಭಿನಂದನೆಗಳು. ▪

ಪ್ರತಿವರ್ಷದಂತೆ ಈ ವರ್ಷವೂ ಸಿಡ್ನಿ ಶ್ರೀ ರಾಘವೇಂದ್ರ ಭಕ್ತ ಮಂಡಳಿಯವರು ಮಾಘ ಮಾಸದಲ್ಲಿ ಬರುವ ಶ್ರೀ ಮಧ್ವನವಮಿಯನ್ನು ಎಲ್ಲ ಭಕ್ತಾದಿಗಳು ಸೇರಿ ದಿನಾಂಕ ೨೦/೨/೧೬ ರಂದು ಆಬರ್ನ್ ನಲ್ಲಿರುವ ಶ್ರೀ ಮಂದಿರದಲ್ಲಿ ಆಚರಿಸಿದರು .ಶ್ರೀಮನ್ ಮಧ್ವಾಚಾರ್ಯರು ಮಾಘ ಶುದ್ಧ ನವಮಿಯಂದು ಬದರಿಯಿಂದ ವ್ಯಾಸರೊಡನೆ ವಿಲೀನರಾಗಲು ಶಿಷ್ಯರಿಗೆ ಪ್ರವಚನ ಮಾಡುವಾಗ ಆಕಾಶದಿಂದ ಪುಷ್ಪಗಳ ಮಳೆಯಾಗಲು ಅದರಲ್ಲಿ ಅದೃಷ್ಯರಾದರು .ಈ ದಿನವನ್ನು ಶ್ರೀ ಮಧ್ವನವಮಿ ಎಂದು ಆಚರಸಲಾಗುತ್ತೆ .ಶ್ರೀ ಆಚಾರ್ಯರು ಶ್ರೀ ವಾಯು ದೇವರ ಹಾಗು ಶ್ರೀ ಭೀಮದೇವರ ಅವತಾರವೆಂದು ಮಧ್ವಮತವನ್ನು ಪಾಲಿಸುವವರು ನಂಬುತ್ತಾರೆ. ಶ್ರೀ ಮಧ್ವಾಚಾರ್ಯರನ್ನು ಆನಂದತೀರ್ಥರು ಎಂದೂ ಗುರುತಿಸುತ್ತಾರೆ.

ಹಿಂದಿನ ವರುಷದಂತೆ ಈ ಸಲವೂ ಎಲ್ಲ ಭಕ್ತಾದಿಗಳು ಸೇರಿದ ಮೇಲೆ ಬೆಳಿಗ್ಗೆ ಸುಮಾರು ೯:೩೦ ಘಂಟೆಗೆ ಎಲ್ಲರ ಸಂಕಲ್ಪ ಮಾಡಿ .ಆಮೇಲೆ ಶ್ರೀ ವಿಘ್ನೇಶ್ವರನ ಪೂಜೆಯೊಂದಿಗೆ ಶುರು ಮಾಡಿ .ನಂತರ ಶ್ರೀ ಕೃಷ್ಣನ ಅರ್ಚನೆ ಹಾಗು ಎಲ್ಲರೂ ತಂದ ವಿಗ್ರಹ ಗಳನ್ನೂ ಮತ್ತು ವಾಯುದೇವರ ಅಭಿಷೇಕ ವಾಯು ಸ್ತುತಿ ಯೊಂದಿಗೆ ಆಯಿತು. ವಾಯುದೇವರ ಅರ್ಚನೆ,ಶ್ರೀ ಮಧ್ವಾಚಾರ್ಯರ ಚಿತ್ರಪಟಗಳಿಗೆ ಅರ್ಚನೆಯನ್ನು ಮಾಡಿ , ದೂಪ ದೀಪಾದಿಗಳಿಂದ ಸುದೀರ್ಘ ಪೂಜೆ ಸುಗಂಧ ದ್ರವ್ಯಗಳಿಂದ ಹಾಗೂ ಪ್ರಸಾದದ ನೈವೇದ್ಯ ದೊಂದಿಗೆ ಮೊದಲನೇ ಹಂತದ ಪೂಜೆ ಮುಗಿಯಿತು.

ತದನಂತರ ಶ್ರೀ ಆಚಾರ್ಯರ ಶ್ರೀ ಮಧ್ವ ವಿಜಯದ ಮೊದಲನೆ ಅಧ್ಯಾಯ, ಶ್ರೀ ಕ್ರಿಷ್ಣನಾಮವಳಿ, ದ್ವಾದಶ ಸ್ತೋತ್ರ, ಶ್ರೀ ಮಧ್ವನಾಮ, ಶ್ರೀ ರಾಘವೇಂದ್ರ ಸ್ವಾಮಿಗಳ ಸ್ತೋತ್ರಗಳನ್ನು ಹೇಳಿದರು. ನಂತರ ಭಕ್ತಾದಿಗಳು ದೇವರ ಹಾಡುಗಳು ಮತ್ತೆ ಈ ವರ್ಷದ ವಿಶೇಷ ಮಕ್ಕಳಿಂದ ಶ್ರೀ ಮಧ್ವಾಚಾರ್ಯರ ಜೀವನವನ್ನು ಚಿಕ್ಕದಾಗಿ ಪರಿಚಯ ಹಾಗು ದೇವರ ನಾಮಗಳು .ಕೊನೆಯದಾಗಿ ಮಹಾಮಂಗಳರತಿ ಮತ್ತು ಎಲ್ಲ ಪ್ರಸಾದಗಳನ್ನು ನೈವೇದ್ಯ ಮಾಡಿ ಮಂತ್ರಪುಷ್ಪದೊಂದಿಗೆ ನಮಸ್ಕಾರ ಮಾಡಿ ಪೂಜೆಯ ಕಾರ್ಯಕ್ರಮಗಳು ಮುಗಿಯಿತು.

ಹೊರಗೆ ಪುಷ್ಕಳವಾದ ಪ್ರಸಾದ ವಿನಯೋಗ ಬಿಸಿಬೇಳೆ ಭಾತ್, ಮೊಸರನ್ನ, ಕೋಸಂಬರಿ ಹಾಗು ಶ್ರೀ ಮಧ್ವನವಮಿ ಹಯಗ್ರೀವ ವಿಲ್ಲದೆ ಮುಗಿಯದು .ಇದನ್ನು buffette ಮೂಲಕ ವಿತರಣೆ ಮಾಡಿ (ಜಾಗದ ಕೊರತೆಯಿಂದ) ಮುಂದೆ ಬಾಳೆಯೆಲೆ ಊಟವನ್ನು ಮಾಡಲು ಮಂಡಳಿ ಶ್ರಮಿಸುತ್ತಿದೆ. ಕೊನೆಗೆ ಮಂಡಳಿಯವರು ದೇವಸ್ಥಾನವನ್ನು ಸ್ವಚ್ಚ ಗೊಳಿಸಿ ಆನಂದ ಗೆಲುವಿನ ನಗೆಬೀರುತ್ತಾ ಅವರವರ ಮನೆಗಳಿಗೆ ನಿರ್ಗಮಿಸಿದರು. ▪

ರೋಮ್ ನಗರದ ಕನ್ಯೆ ಆಗ್ನೆಸ್

ಡಾ ॥ ಸಿ.ವಿ. ಮಧುಸೂದನ

ಸಾಂಪ್ರದಾಯಿಕ ದೃಷ್ಟಿಯಲ್ಲಿ ಭಾರತದ ಪತಿವ್ರತೆಯರ ವಿಶೇಷ ಗುಣವೆಂದರೆ 'ಪತಿಯೇ ಪರದೈವ' ಎಂದು ನಂಬಿ ಅದರಂತೆ ಬಾಳುವುದು. ಆದರೆ ಇದಕ್ಕೆ ಬದಲಾಗಿ 'ಪರಮಾತ್ಮನೇ ನನ್ನ ಪತಿ' ಎಂಬ ಅನುಪಮ ಭಾವನೆಯನ್ನು ಗಮನಿಸಿದರೆ, ತಕ್ಷಣ ನಮ್ಮ ನೆನಪಿಗೆ ಬರುವುದು ಕೇವಲ ಮೂವರು: ಶ್ರೀರಂಗದ ರಂಗನಾಥನೇ ತನ್ನ ಪತಿ ಎಂದು ನಂಬಿದ ಗೋದಾದೇವಿ (ಆಂಡಾಳ್), ಶ್ರೀಶೈಲದ ಮಲ್ಲಿಕಾರ್ಜುನನೇ ತನ್ನ ಒಡೆಯ ಎಂದು ಪರಿಗಣಿಸಿದ ಅಕ್ಕಮಹಾದೇವಿ ಮತ್ತು ಗಿರಿಧರ ಗೋಪಾಲನೇ ತನ್ನ ವಲ್ಲಭನೆಂದು ನೆನಸಿದ ಮೀರಾಬಾಯಿ.

ಕ್ರೈಸ್ತ ಧರ್ಮೀಯರಲ್ಲೂ ಹೀಗೆ ಭಾವಿಸುವುದು ಅಪರೂಪವಲ್ಲ. ಒಂದು ಕ್ಯಾಥೊಲಿಕ್ ಸನ್ಯಾಸಿನಿಯರ ಸಮುದಾಯವೇ ತಮ್ಮನ್ನು ಕ್ರಿಸ್ತನ ವಧುಗಳು (Brides of Christ) ಎಂದು ಕರೆದುಕೊಳ್ಳುತ್ತದೆ. ಹಾಗೆ ಕ್ರಿಸ್ತನೇ ತನ್ನ ವರ ಎಂದು ತಿಳಿದುಕೊಂಡವರಲ್ಲಿ, ರೋಮ್ ನಗರದ ಆಗ್ನೆಸ್ ಅತ್ಯಂತ ಪ್ರಾಚೀನರಲ್ಲಿ ಒಬ್ಬಳು.

ಆಗ್ನೆಸ್ ಕ್ರಿ.ಶ. 291 ರಲ್ಲಿ ಶ್ರೀಮಂತ ದಂಪತಿಗಳಿಗೆ ಜನಿಸಿದಳು ಅವರ ತಂದೆತಾಯಿಗಳು ಕ್ರೈಸ್ತರು. ಆಗಿನ ಕಾಲದಲ್ಲಿ ರೋಮನ್ನರು ಕ್ಷುದ್ರಧರ್ಮಿಗಳು (pagans) ಮಾತ್ರವಲ್ಲ, ರೋಮ್ ಚಕ್ರಾಧಿಪತ್ಯದಲ್ಲಿ ಕ್ರೈಸ್ತಧರ್ಮವನ್ನು ಪಾಲಿಸುವುದೇ ದೊಡ್ಡ ಅಪರಾಧವಾಗಿದ್ದಿತು. ಈ ಕಾರಣದಿಂದ ಅಲ್ಲಿದ್ದ ಕ್ರೈಸ್ತರು ತಮ್ಮ ಮತವನ್ನು ರಹಸ್ಯವಾಗಿ ಅನುಸರಿಸುತ್ತಿದ್ದರು.

ಆಗ್ನೆಸ್ ಬಲು ಚೆಲುವೆಯಾದ ಹುಡುಗಿ. ಅವಳ ಕೈಹಿಡಿಯಲು ಕಾತುರರಾಗಿದ್ದ ಯುವಕರೆಷ್ಟೋ, ಅವಳನ್ನು ತಮ್ಮ ಮನೆಯ ವಧುವಾಗಿ ತರಲು ಬಯಸಿದ ಗಣ್ಯರ ಮನೆಗಳೆಷ್ಟೋ! ಅವಳ ಅನನ್ಯ ಪ್ರೀತಿಯಾದರೋ ದೇವರಿಗೆ ಮಾತ್ರವೇ. "ಪ್ರಾಣ ಹೋದರೂ ಪಾಪ ಮಾಡುವುದಿಲ್ಲ" ಎಂಬುದೇ ಅವಳ ನಿರ್ಧಾರ. ಯಾರಾದರೂ ಮದುವೆಯ ವಿಷಯವನ್ನು ಪ್ರಸ್ತಾಪಿಸಿದಾಗ ಅವಳಲ್ಲಿದ್ದ ಉತ್ತರ ಒಂದೇ: "ಯೇಸು ಕ್ರಿಸ್ತನೇ ನನ್ನ ಪತಿ". ಇದರಿಂದ ಅವಮಾನಿತರಾದ ಕೆಲವು ಯುವಕರು "ಈಕೆ ಕ್ರೈಸ್ತ ಧರ್ಮೀಯಳು" ಎಂದು ಸಂಬಂಧ ಪಟ್ಟ ಅಧಿಕಾರಿಗಳಿಗೆ ದೂರಿಡಲು ಪ್ರಾರಂಭಿಸಿದರು. ಆ ಪ್ರಾಂತ್ಯದ ರಾಜ್ಯಪಾಲನ ಮಗನಾದ ಪ್ರಕೋಪನು ತನ್ನನ್ನು ಮದುವೆಯಾದರೆ ಬಗೆಬಗೆಯ ವಸ್ತ್ರ, ಆಭರಣ ಏನು ಬೇಕಾದರೂ ಕೊಡುತ್ತೇನೆಂದು ಎಷ್ಟು ಆಸೆಗಳನ್ನು ತೋರಿಸಿದರೂ, ಆ ಬಾಲಕಿ "ನನ್ನನ್ನು ಆ ಜಗದೀಶನಿಗೆ ಕೊಟ್ಟಾಗಿದೆ" ಎಂದೇ ಉತ್ತರ ಕೊಡುತ್ತಿದ್ದಳು. ಇದರಿಂದ ಕೋಪಗೊಂಡ ಪ್ರಕೋಪನು ಅವಳನ್ನು ತನ್ನತಂದೆಯ ಬಳಿಗೆ ಎಳೆದು ತಂದು "ಇವಳು ಕ್ರೈಸ್ತಳು, ಇವಳನ್ನು ಶಿಕ್ಷಿಸಿ" ಎಂದು ಆಗ್ರಹ ಮಾಡಿದನು.ರಾಜ್ಯಪಾಲನೂ "ನಿನ್ನ ಧರ್ಮವನ್ನು ತ್ಯಜಿಸಿದರೆ ನಿನಗೆ ಅಮೂಲ್ಯವಾದ ಉಡುಗೊರೆಗಳನ್ನು ಕೊಡುತ್ತೇನೆ" ಎಂದು ಪ್ರಲೋಭಿಸಲು ಯತ್ನಿಸಿದನು. ಅವಳು ಮಣಿಯಲಿಲ್ಲ.

ಅನಂತರ ನ್ಯಾಯಾಧಿಕಾರಿ ಸೆಂಪ್ರೋನಿಯಸ್ ಎಂಬುವನು ವಿಚಾರಣೆ ಮಾಡಿ ಅವಳಿಗೆ ಸಂಕೋಲೆಗಳನ್ನು ತೊಡಿಸಿ ಕಾರಾಗೃಹದಲ್ಲಿ ಹಾಕುವಂತೆ ತೀರ್ಪಿತ್ತನು; ಇದರಿಂದಲೂ ಯಾವ ಪರಿಣಾಮವೂ ಆಗಲಿಲ್ಲ. ಕೊನೆಗೆ ಅವಳನ್ನು ವಿವಸ್ತ್ರಮಾಡಿ ಬೀದಿಗಳಲ್ಲಿ ಎಳೆದುಕೊಂಡು ಹೋಗಿ ಸೂಳೆಗೇರಿಯಲ್ಲಿ ಬಿಟ್ಟುಬರುವಂತೆ ಆಜ್ಞೆ ಮಾಡಿದನು. ಆಗ ಅವಳ ತಲೆಗೂದಲು ಉದ್ದವಾಗಿ ಬೆಳೆದು ದೇಹವನ್ನೆಲ್ಲ ಮುಚ್ಚಿ ಅವಳ ಮಾನವನ್ನು ಕಾಪಾಡಿತು! ಅವಳ ಮೇಲೆ ಬಲಾತ್ಕಾರ ಮಾಡಲು ಯತ್ನಿಸಿದವರು ಇದ್ದಕ್ಕಿದ್ದಂತೆ ಕುರುಡರಾದರು!

ಕೊನೆಗೂ ಅವಳಿಗೆ ಮರಣದಂಡನೆ ವಿಧಿಸಲಾಯಿತು. (ಈ ತೀರ್ಪಿತ್ತವನು ಸೆಂಪ್ರೋನಿಯಸ್ಸನೋ, ಬೇರೆಯವರೋ ಎಂಬಲ್ಲಿ ವಿವಾದವಿದೆ. ಏಕೆಂದರೆ ಒಂದು ದಂತಕಥೆಯ ಪ್ರಕಾರ ಸೆಂಪ್ರೋನಿಯಸ್ಸನ ಮಗನು ಇದ್ದಕ್ಕಿದ್ದಂತೆ ಮೃತನಾಗಲು, ಆಗ್ನೆಸ್ ದೇವರನ್ನು ಪ್ರಾರ್ಥಿಸಿ ಅವನನ್ನು ಮತ್ತೆ ಬದುಕಿಸಿದಳಂತೆ. ಆದ್ದರಿಂದ ಸೆಂಪ್ರೋನಿಯಸ್ಸನು ಅವಳನ್ನು ಶಿಕ್ಷಿಸಲು ನಿರಾಕರಿಸಿದನು).

ಮುಂದಿನ ಪುಟ ನೋಡಿ ...

ಅಗ್ನೆಸ್ಸಳಿಗೆ ಮರಣದಂಡನೆಯ ತೀರ್ಪಿನಿಂದ ಸ್ವಲ್ಪವೂ ದುಃಖವಾಗಲಿಲ್ಲ. ಮದುವೆಯಾಗಲು ಹೋಗುತ್ತಿರುವ ವಧುವಿನಂತೆ ಸಂತೋಷದಿಂದಿದ್ದಳು. ಆದರೆ ಆ ಸುಂದರ ಬಾಲಕಿಯು ವಧಸ್ಥಾನಕ್ಕೆ ಹೋಗುತ್ತಿರುವುದನ್ನು ನೋಡುತ್ತಿದ್ದ ಬಹು ಮಂದಿ, ಅವರು ಕ್ರಿಸ್ತದ್ವೇಷಿಗಳಾದ್ದರೂ ಸಹ, ಶೋಕದಿಂದ ರೋದಿಸತೊಡಗಿದರು.

ನಾಲ್ಕು ರಸ್ತೆಗಳು ಸೇರುವ ಒಂದು ಚೌಕದಲ್ಲಿ ಮರದ ಕಂಭವನ್ನು ನೆಟ್ಟು, ಅಗ್ನೆಸಳನ್ನು ಅದಕ್ಕೆ ಕಟ್ಟಿದರು. ಸುತ್ತಲೂ ಒಣ ಕಟ್ಟಿಗೆಗಳನ್ನು ಪೇರಿಸಿ ಅವಕ್ಕೆ ಬೆಂಕಿ ಹಚ್ಚಿದರು. ಮೊದಮೊದಲು ಕಟ್ಟಿಗೆಗಳು ಹೊತ್ತಿಕೊಳ್ಳಲೇ ಇಲ್ಲ; ಅನಂತರ ಹೊತ್ತಿಕೊಂಡರೂ, ಜ್ವಾಲೆಗಳು ಅವಳನ್ನು ಸೋಂಕಲಿಲ್ಲ. ಇದರಿಂದ ರೋಸಿಹೋದ ಅಧಿಕಾರಿಯೊಬ್ಬನು ತನ್ನ ಖಡ್ಗದಿಂದ ಅವಳ ಕುತ್ತಿಗೆಗೆ ಪ್ರಹಾರ ಮಾಡಿ, ಆ ಪಾಪವರಿಯದ ಹುಡುಗಿಯನ್ನು ಸಂಹರಿಸಿದನು. ಈ ಘಟನೆ ಸಂಭವಿಸಿದ್ದು 21 ಜನವರಿ 304. ಆಗ ಅವಳಿಗೆ 13 ವರ್ಷ ಕೂಡ ಆಗಿರಲಿಲ್ಲ.

ಅಗ್ನೆಸಳನ್ನು ರೋಮಿನಿಂದ ಮೆಂಟಾನ ಎಂಬ ಊರಿಗೆ ಹೋಗುವ ದಾರಿಯ (ವಿಯ ನೋಮೆಂಟಾನ) ಬದಿಯಲ್ಲಿ ಸಮಾಧಿಮಾಡಿದರು. ಇದಾದ ಕೆಲವು ದಿನಗಳನಂತರ ಆಗ್ನೆಸಳ ದಾದಿಯ ಮಗಳಾದ ಎಮೆರೆನ್ಷಿಯಾನ ಎಂಬುವಳು ಆ ಸಮಾಧಿಯ ಬಳಿ ಪ್ರಾರ್ಥಿಸುತ್ತಿದ್ದಳು. ಇದನ್ನು ಕಂಡ ಕೆಲವರು ಅವಳಿಗೆ ಅಲ್ಲಿಂದ ತೊಲಗಲು ಹೇಳಿದರು. ಅವಳು ಅದಕ್ಕೆ ಕಿವಿಗೊಡದೆ, ಅಮಾಯಕ ಬಾಲಕಿಯನ್ನು ಕೊಂದದ್ದಕ್ಕಾಗಿ ಅವರನ್ನೇ ತೆಗಳಿದಳು. ಇದರಿಂದ ಕ್ರುದ್ಧರಾದ ಆ ಜನರು ಅವಳನ್ನು ಕಲ್ಲುಗಳಿಂದ ಹೊಡೆದು ಅಲ್ಲೇ ಸಾಯಿಸಿದರು.

ವಿಪರ್ಯಾಸವೆಂದರೆ, ಈ ಕೊಲೆಗಳು ನಡೆದ ಕೇವಲ ಎರಡು ವರ್ಷಗಳ ನಂತರ, ಕ್ರಿ.ಶ. 306 ರಲ್ಲಿ, ಕಾನ್‌ಸ್ಟಂಟೈನ್ ಎಂಬುವನು ರೋಮ್ ಸಾಮ್ರಾಜ್ಯದ ಚಕ್ರವರ್ತಿಯಾದನು. ಚರಿತ್ರೆಯ ವಿದ್ಯಾರ್ಥಿಗಳಿಗೆ ತಿಳಿದಿರುವಂತೆ ಇವನು ಕ್ರಿ.ಶ. 312 ರಲ್ಲಿ ತಾನೇ ಕ್ರೈಸ್ತ ನಾದುದು ಮಾತ್ರವಲ್ಲ, ಸಾಮ್ರಾಜ್ಯದ ಎಲ್ಲೆಡೆಯೂ ಕ್ರೈಸ್ತರಿಗೆ, ಅವರ ಧರ್ಮದ ನಿಮಿತ್ತ, ಯಾವ ತೊಂದರೆಯೂ ಆಗಬಾರದೆಂದು ಘೋಷಿಸಿದನು (ಮಿಲನ್ ನಗರದ ರಾಜಶಾಸನ, ಕ್ರಿ.ಶ. 313). ಹುತಾತ್ಮಳಾದ ಆಗ್ನೆಸ್ ಅದೇ ಶತಮಾನದಲ್ಲಿ ಸಂತಳಾದಳು.

ಬ್ರಿಟಿಷ್ ಮ್ಯೂಸಿಯಂ ನಲ್ಲಿ ರಾಜವಂಶಕ್ಕೆ ಸೇರಿದ ಒಂದು ಬಂಗಾರದ ಬಟ್ಟಲಿದೆ. ಇದರ ಮೇಲೆ ಆಗ್ನೆಸ್ ಜೀವನದ ಕೆಲವು ಘಟನೆಗಳನ್ನು ಚಿತ್ರಿಸಲಾಗಿದೆ. ಆಗ್ನೆಸ್ ಮತ್ತು ಎಮೆರೆನ್ಷಿಯಾನ ಇಬ್ಬರ ಚಿತ್ರಗಳೂ ಈ ದೃಶ್ಯಗಳಲ್ಲಿ ಕಾಣಬರುತ್ತವೆ.

ಆಗ್ನೆಸ್ ಳ ಜೀವನ ಚಿತ್ರವಿರುವ ಬಂಗಾರದ ಪಾತ್ರೆ

ಅಗ್ನೆಸಳನ್ನು ಬಾಲೆಯರ, ಪಾವಿತ್ರ್ಯ ದ, ಅಥವಾ ಬಲಾತ್ಕಾರಕ್ಕೆ ಒಳಗಾದವರ ಪೋಷಕ ಸಂತಳನ್ನಾಗಿ ಪರಿಗಣಿಸುತ್ತಾರೆ. ಈಗ ಮತ್ತೊಮ್ಮೆ ಆಗ್ನೆಸಳ ಚಿತ್ರವನ್ನು ಗಮನಿಸಿದರೆ ಅದರಲ್ಲಿ ಮುಗ್ಧತೆಯ ಕುರುಹಾದ ಕುರಿಮರಿ ಮತ್ತು ಬಲಿದಾನವನ್ನು ಪ್ರತಿಬಿಂಬಿಸುವ ತಾಳೆಗರಿಯನ್ನು ನೋಡಬಹುದು.

ಪರಮಾತ್ಮನೇ ತನ್ನ ಪತಿ ಎಂಬ ಭಾವನೆ ಮಾತ್ರವಲ್ಲದೆ, ಕೇವಲ ಹದಿಮೂರು ವರ್ಷದ ಹುಡುಗಿಯಾಗಿದ್ದಾಗಲೇ ಇಹಲೋಕವನ್ನು ತ್ಯಜಿಸಿದ ಗೋದಾದೇವಿಯ (ಆಂಡಾಳ್) ಕಥೆಗೂ, ಸರ್ವಸ್ವನ್ನೂ ತೊರೆದು ಕೇವಲ ಕೇಶಾಂಬರಿಯಾಗಿ ಕಲ್ಯಾಣಕ್ಕೆ ಹೊರಟ ಅಕ್ಕಮಹಾದೇವಿಯ ಜೀವನಕ್ಕೂ, ಆಗ್ನೆಸಳ ಬಾಳಿನಲ್ಲಿ ನೇರವಾದ ಸಾಮ್ಯಗಳಿವೆಯಲ್ಲವೇ? ▪

ರಾಜಿ ಜಯದೇವ್ (Accredited Practising Dietician)
Mrs Raji Jayadev, B.Sc (Hons) Dip Nutr & Diet (Syd)

ಮದ್ರಾಸ್ ಅರಿಸಿನ

ಅಲೆಪ್ಪಿ ಅರಿಸಿನ

ಅತ್ಯಂತ ಪ್ರಾಚೀನ ಸಾಂಬಾರ ಪದಾರ್ಥಗಳಲ್ಲಿ ಅರಿಸಿನದ ಪುಡಿ ಕೂಡ ಒಂದು. ಸುಮಾರು 4000 ವರ್ಷಗಳ ಹಿಂದೆಯೇ ಇದನ್ನು ಅಡಿಗೆಗೂ, ಧಾರ್ಮಿಕ ಆಚರಣೆಗಳಿಗೂ, ಔಷಧಿಯಾಗಿಯೂ ಉಪಯೋಗಿಸುತ್ತಿದ್ದರಂತೆ. ಭಾರತೀಯ ಸಂಸ್ಕೃತಿಯಲ್ಲಿ ಮದುವೆ, ಮುಂಜಿ, ಹಬ್ಬಗಳು ಮುಂತಾದ ಸಾಂಪ್ರದಾಯಿಕ ಆಚರಣೆಗಳಲ್ಲಿ, ಕುಂಕುಮದೊಂದಿಗೆ ಅರಿಸಿನ ಕೂಡ ಪ್ರಮುಖ ಪಾತ್ರವಹಿಸುತ್ತದೆ. ಕುಂಕುಮ ತಯಾರಿಸಲು ಅರಿಸಿನ (ಮತ್ತು ಸುಣ್ಣ) ಬೇಕೇಬೇಕು. ಅರಿಸಿನದ ಪುಡಿಯ ರುಚಿ ಕಹಿ, ಸಿಹಿ ಮತ್ತು ಕಾಳು ಮೆಣಸಿನಂತೆ ಖಾರ. ಮೃದುವಾದ ಸುವಾಸನೆಯನ್ನು ಕೂಡ ಹೊಂದಿದೆ. ಪುಡಿಯನ್ನು ಗಿಡದ ಬೇರಿನಿಂದ (ಅರಿಸಿನದ ಕೊಂಬಿನಿಂದ) ತೆಗೆಯುತ್ತಾರೆ. ಬಹು ವಾರ್ಷಿಕ (perennial) ಬೆಳೆ, ವೈಜ್ಞಾನಿಕ ಹೆಸರು ಕರ್ಕ್ಯುಮಾ ಲಂಗಾ (Curcuma longa), ಜಿಂಜಿಬರೇಸಿ (Zingiberaceae) ಕುಟುಂಬಕ್ಕೆ ಸೇರಿದೆ. ಇದರ ತವರು ದಕ್ಷಿಣ ಭಾರತ, ಆದರೆ ಭಾರತದ ಎಲ್ಲ ಪ್ರದೇಶಗಳಲ್ಲೂ, ಏಷ್ಯಾ ಮತ್ತು ಆಫ್ರಿಕಾ ಖಂಡದ ಕೆಲವು ಪ್ರದೇಶಗಳಲ್ಲೂ ಬೆಳೆಯುತ್ತದೆ.

ಉಪಯೋಗಗಳು

ಏಷ್ಯಾಖಂಡದ ಅನೇಕ ದೇಶಗಳಲ್ಲಿ (ಉದಾ: ಇಂಡಿಯಾ, ನೇಪಾಳ, ವಿಯೆಟ್ನಾಂ, ಕ್ಯಾಂಬೋಡಿಯಾ, ಇಂಡೋನೇಷ್ಯಾ, ಥೈಲ್ಯಾಂಡ್) ಮತ್ತು ಮಧ್ಯ ಪೂರ್ವ ದೇಶಗಳಲ್ಲಿ ಅರಿಸಿನದ ಪುಡಿಯನ್ನು ಅಡಿಗೆಗೆ ಬಳಸುತ್ತಾರೆ. ನಾವು ಅನೇಕ ಅಡಿಗೆಗಳಿಗೆ ಒಗ್ಗರಣೆ ತಯಾರಿಸುವಂತೆ, ಪರ್ಷಿಯಾದ (ಈಗಿನ ಇರಾನ್ ದೇಶ) ಅನೇಕ ಅಡಿಗೆಗಳಿಗೆ ಎಣ್ಣೆ ಮತ್ತು ಅರಿಸಿನದಲ್ಲಿ ಹುರಿದ ನೀರುಳ್ಳಿಯ ಒಗ್ಗರಣೆಯನ್ನು ತಯಾರಿಸುತ್ತಾರೆ. ಅರಿಸಿನದ ಕೊಂಬನ್ನು ಕೂಡ ಅಡಿಗೆಗೆ ಬಳಸಲಾಗುತ್ತದೆ. ಅರಿಸಿನದ ಎಲೆಯಲ್ಲಿ ಬೇಯಿಸಿದ ಕಡುಬು ಮುಂತಾದ ಹಲವು ಬಗೆಯ ಖಾದ್ಯಗಳು ಬಲು ರುಚಿ. ಮೃದುವಾದ, ರೋಮರಹಿತ ತ್ವಚೆ ಹೊಂದಲು, ಮೊಡವೆಗಳನ್ನು ನಿವಾರಿಸಲು ಮತ್ತು ಮುಖ ಬಣ್ಣವನ್ನು ತಿಳಿಗೊಳಿಸಲು ಅರಿಸಿನವನ್ನು ಮುಖಕ್ಕೆ ಹಚ್ಚಿಕೊಳ್ಳುತ್ತಾರೆ. ಅರಿಸಿನ ಸೇರಿಸಿದ ಹಲವಾರು ಸೌಂದರ್ಯವರ್ಧಕಗಳು (ಲೋಷನ್, ಮುಲಾಮು) ಆಯುರ್ವೇದದ ಅಥವಾ ಪ್ರಕೃತಿ ಸಹಜ ಉತ್ಪನ್ನಗಳೆಂಬ ಮುಖವಾಡದೊಂದಿಗೆ ಮಾರುಕಟ್ಟೆಗೆ ಬಂದಿವೆ. ಅವುಗಳಲ್ಲಿರುವ ಅರಿಸಿನದ ಪ್ರಮಾಣ ಅತಿ ಕಡಿಮೆ, ಇತರ ರಾಸಾಯನಿಕಗಳೇ ಹೆಚ್ಚು. ಹಲವು ಬಗೆಯ ಸೋಪು ಮತ್ತು ಸನ್ ಸ್ಕ್ರೀನ್ ಗಳ (sunscreens) ತಯಾರಿಕೆಯಲ್ಲೂ ಅರಿಸಿನವನ್ನು ಉಪಯೋಗಿಸುತ್ತಾರೆ.

ಅಂಗಡಿಗಳಲ್ಲಿ ದೊರಕುವ ಅನೇಕ ಸಂಸ್ಕರಿತ ಆಹಾರ ಪದಾರ್ಥಗಳಿಗೆ ಹಳದಿ ಬಣ್ಣ ಕೊಡಲು ಅರಿಸಿನವನ್ನು ಉಪಯೋಗಿಸುತ್ತಾರೆ. ಉದಾಹರಣೆಗೆ ಕಿತ್ತಳೆ ಹಣ್ಣಿನರಸ, ಬೆಣ್ಣೆ, ಮಾರ್ಜರೀನ್, ಐಸ್ ಕ್ರೀಮ್, ಮೊಸರು, ಬಿಸ್ಕೀಟುಗಳು, ರೆಡಿ-ಟು-ಈಟ್ ಸೀರಿಯಲ್ ಗಳು, ಪಾಪ್ ಕಾರ್ನ್, ಮಸಾಲೆಪುಡಿಗಳು ಇತ್ಯಾದಿ.

ಅರಿಸಿನದ ಅನೇಕ ಆರೋಗ್ಯಪೂರಕ ಮತ್ತು ಔಷಧೀಯ ಗುಣಗಳಿಗೆ ಕಾರಣ ಅದರಲ್ಲಿರುವ ಹಲವಾರು ರಾಸಾಯನಿಕಗಳು, ಮುಖ್ಯವಾಗಿ ಕರ್ಕ್ಯುಮಿನ್ ಮತ್ತು ಟರ್ಮರೋನ್.

ಮುಂದಿನ ಪುಟ ನೋಡಿ ...

ಮಾರುಕಟ್ಟೆಯಲ್ಲಿ ದೊರಕುವ ಅರಿಸಿನ ಎರಡು ಬಗೆಯದು.

1. ಕೇಸರಿ ಬಣ್ಣದ, ಶೇಕಡಾ 3.5 ರಿಂದ 4 ರಷ್ಟು ಕರ್ಕ್ಯುಮಿನ್ ಹೊಂದಿರುವ **ಅಲ್ಲೆಪ್ಪಿ ಅರಿಸಿನ**.
2. ಹಳದಿ ಬಣ್ಣದ, ಶೇಕಡಾ 1.5 ರಿಂದ 1.8 ರಷ್ಟು ಕರ್ಕ್ಯುಮಿನ್ ಹೊಂದಿರುವ **ಮದ್ರಾಸ್ ಅರಿಸಿನ**.

ಅತಿ ಹೆಚ್ಚು ಕರ್ಕ್ಯುಮಿನ್ ಹೊಂದಿರುವ ಅಲ್ಲೆಪ್ಪಿ ಅರಿಸಿನವನ್ನು ಉಪಯೋಗಿಸುವುದು ಆರೋಗ್ಯಕ್ಕೆ ಒಳ್ಳೆಯದು.
ಅರಿಸಿನವನ್ನು ಒಳ್ಳೆಯ ಹೆಸರು ಪಡೆದ ಅಂಗಡಿಗಳಲ್ಲೇ ಖರೀದಿಸಿ. ಏಕೆಂದರೆ ಅರಿಸಿನಕ್ಕೆ ಅಗ್ಗಬೆಲೆಯ, ವಿಷಪೂರಿತ 'ಲೆಡ್ ಆಕ್ಸೈಡ್', 'ಮೆಟಾನಿಲ್ ಯೆಲ್ಲೊ' ಆಥವ 'ಆಸಿಡ್ ಯೆಲ್ಲೊ' ಕಲಬೆರಕೆ ಮಾಡಿದ ಹಲವಾರು ಸಂಗತಿಗಳು ಬ್ರಿಟನ್ನಿನಲ್ಲಿ ವರದಿಯಾಗಿವೆ.

ಸಾಂಪ್ರದಾಯಿಕ ವೈದ್ಯಪದ್ಧತಿಯಲ್ಲಿ ಅರಿಸಿನ

ಆಯುರ್ವೇದ, ಚೈನಾದ ಸಾಂಪ್ರದಾಯಿಕ ವೈದ್ಯಪದ್ಧತಿ ಮತ್ತು ಪರ್ಯಾಯ ವೈದ್ಯಕೀಯ ಚಿಕಿತ್ಸೆಯಲ್ಲಿ ಅರಿಸಿನವನ್ನು ಜಂತು ಹುಳು ನಿವಾರಣೆಗೆ, ಜೀರ್ಣಶಕ್ತಿಯನ್ನು ಹೆಚ್ಚಿಸುವುದಕ್ಕೆ, ಕೀಲುನೋವು ನಿವಾರಣೆಗೆ, ಚರ್ಮ, ಗಂಟಲು, ಯಕೃತ್ತು, ಅಸ್ಥಮಾ ಮತ್ತು ಜೀರ್ಣಾಂಗಗಳ ರೋಗ ಪರಿಹಾರಕ್ಕೆ ಬಳಸುತ್ತಾರೆ. ಕ್ಯಾನ್ಸರ್ ಚಿಕಿತ್ಸೆಗೂ ಅರಿಸಿನವನ್ನು ಉಪಯೋಗಿಸುತ್ತಾರೆಂದು ತಿಳಿದುಬಂದಿದೆ. ಅರಿಸಿನದ ಪುಡಿ ಬೆರೆಸಿದ ಬಿಸಿ ಹಾಲನ್ನು ಕಫ ನಿರ್ಮೂಲನೆಗೆ, ಶೀತ, ಕೆಮ್ಮು, ಗಂಟಲುನೋವಿನ ಪರಿಹಾರಕ್ಕೆ ಉಪಯೋಗಿಸುತ್ತಾರೆ.
ದಕ್ಷಿಣ ಏಷ್ಯಾದ ಹಲವಾರು ದೇಶಗಳಲ್ಲಿ ಅರಿಸಿನದ ಪುಡಿಯನ್ನು ನಂಜು ನಿವಾರಣೆಗೆ ಉಪಯೋಗಿಸುತ್ತಾರೆ. ಸುಟ್ಟಗಾಯಕ್ಕೆ, ಬಿದ್ದು ಕೈ ಕಾಲು ತರಚಿದರೆ, ಗಾಯವಾಗಿ ರಕ್ತಸ್ರಾವವಾಗುತ್ತಿದ್ದರೆ ಅರಿಸಿನದ ಪುಡಿಯನ್ನು ಮೆತ್ತುತ್ತಾರೆ.

ಆಧುನಿಕ ವೈದ್ಯಪದ್ಧತಿಯಲ್ಲಿ ಅರಿಸಿನ

ಅರಿಸಿನದ ಔಷಧೀಯ ಗುಣಗಳು ವಿಶ್ವಾದ್ಯಂತ ವಿಜ್ಞಾನಿಗಳ ಆಸಕ್ತಿ ಕೆರಳಿಸಿದೆ. ವಿವಿದ ಕಾಯಿಲೆಗಳ ಮೇಲೆ ಅರಿಸಿನ ಮತ್ತು ಅದರ ಪ್ರಮುಖ ಘಟಕ ಕರ್ಕ್ಯುಮಿನ್ ಬೀರುವ ಪ್ರಭಾವವನ್ನು ತಿಳಿಯಲು ನೂರಾರು ಸಂಶೋಧನೆಗಳೂ ಅಧ್ಯಯನಗಳೂ ನಡೆಯುತ್ತಿವೆ ಮತ್ತು ಪರಿಣಾಮಗಳು ದಾಖಲಾಗುತ್ತಿವೆ. ಈವರೆಗೆ ನಡೆದ ಅಧ್ಯಯನಗಳಿಂದ ತಿಳಿದುಬಂದಿರುವುದೇನೆಂದರೆ -

- ಅರಿಸಿನ ಉರಿಯೂತ ನಿರೋಧಕ (anti-inflammatory). ಆರ್ಥ್ರೈಟಿಸ್ ಮತ್ತು ಆಸ್ಟಿಯೋ ಆರ್ಥ್ರೈಟಿಸ್ ನಿಂದ ಉಂಟಾಗುವ ಕೀಲುನೋವನ್ನು ತಗ್ಗಿಸುತ್ತದೆ. ಒಂದು ಅಧ್ಯಯನದಲ್ಲಿ ಅರಿಸಿನ, ಇಬುಪ್ರೋಫೇನ್ (Nurofen) ಮಾತ್ರೆಗಳಷ್ಟೇ ಚೆನ್ನಾಗಿ ಕೆಲಸಮಾಡುತ್ತದೆ ಎಂದು ಸಾಬೀತಾಗಿದೆ.
- ಅರಿಸಿನದಲ್ಲಿರುವ ದೇಹರಕ್ಷಕ ಆಂಟಿ-ಆಕ್ಸಿಡೆಂಟ್ ಗಳು, ಜೀವಕೋಶಗಳನ್ನೇ ಕೊಲ್ಲಲು ಶಕ್ತವಾಗಿರುವ ಆಕ್ಸಿಡೆಂಟ್ ಗಳನ್ನು (free radicals) ಹೊರತಳ್ಳಲು ಸಹಕರಿಸುತ್ತದೆ.
- ಉವೈಟಿಸ್ (Uveitis) ಎಂಬ ಕಣ್ಣಿನ ಉರಿಯೂತ ತಗ್ಗಿಸಲು ಅರಿಸಿನದ ಕರ್ಕ್ಯುಮಿನ್ ಅಂಶ ಸಹಕಾರಿ.
- ಬಾಯಿಯಲ್ಲಿರುವ ಜೀವಾಣುಗಳ (bacteria) ಪ್ರಮಾಣವನ್ನು ಮತ್ತು ವಸಡಿನ ಉರಿಯೂತ ತಗ್ಗಿಸಲು ಅರಿಸಿನದ ನೀರಿನಿಂದ ಬಾಯಿ ಮುಕ್ಕಳಿಸುವುದು ಇತರ ಔಷಧಿಗಳಷ್ಟೇ ಫಲಕಾರಿ.
- ರಕ್ತ ಹೆಪ್ಪುಗಟ್ಟುವುದನ್ನು ತಗ್ಗಿಸಿ, ರಕ್ತ ಪರಿಚಲನೆಯನ್ನು ಸುಗಮಗೊಳಿಸುತ್ತದೆ.
- ಡಯಾಬಿಟಿಸ್ ಖಾಯಿಲೆಯ ಪ್ರಾಣಿಗಳಿಗೆ ಅರಿಸಿನವನ್ನು ತಿನ್ನಿಸಿದಾಗ ಅವುಗಳ ರಕ್ತದಲ್ಲಿರುವ ಸಕ್ಕರೆಯ ಅಂಶ ಗಣನೀಯವಾಗಿ ಕಡಿಮೆಯಾಯಿತು. ಇದು ಮಾನವನ ಡಯಾಬಿಟಿಸ್ ಚಿಕಿತ್ಸೆಗೆ ಸೂಕ್ತವೇ ಎಂಬುದು ತಿಳಿದಿಲ್ಲ.
- ಪ್ರಾಣಿಗಳ ಮೇಲೆ ನಡೆದ ಅನೇಕ ಅಧ್ಯಯನಗಳಲ್ಲಿ ಅರಿಸಿನದ 'ಕರ್ಕ್ಯುಮಿನ್' ಹಲವು ತರದ ಕ್ಯಾನ್ಸರ್ ಗಳಿಗೆ (ಸ್ತನ, ಚರ್ಮ, ದೊಡ್ಡಕರುಳು, ಪ್ರಾಸ್ಟೇಟ್ ಇತ್ಯಾದಿ) ಫಲಕಾರಿ ಚಿಕಿತ್ಸೆಯಾಗಬಹುದೆಂದು ತಿಳಿದುಬಂದಿದೆ. 'ಕರ್ಕ್ಯುಮಿನ್' ಕ್ಯಾನ್ಸರ್ ಗಡ್ಡೆಗಳ ಬೆಳವಣಿಗೆಗೆ ತಡೆಯೊಡ್ಡುತ್ತದೆ, ಕ್ಯಾನ್ಸರ್ ಜೀವಕಣಗಳ ಉತ್ಪತ್ತಿ ಹಾಗೂ ಬೆಳವಣಿಗೆಗೆ ಅಡ್ಡಿಯುಂಟುಮಾಡುತ್ತದೆ. ಅರಿಸಿನದ ಆಂಟಿ-ಆಕ್ಸಿಡೆಂಟ್ ಗುಣವು ಆರೋಗ್ಯಕರ ಜೀವಕಣಗಳಿಗೆ ರಕ್ಷಣೆ ನೀಡಿ ಕ್ಯಾನ್ಸರ್ ಹಬ್ಬುವುದನ್ನು ತಡೆಹಿಡಿಯುತ್ತದೆ.

ಮುಂದಿನ ಪುಟ ನೋಡಿ ...

ಅರಿಸಿನದಲ್ಲಿ ಆರೋಗ್ಯದಾಯಕ ಮತ್ತು ಆರೋಗ್ಯಪೂರಕ ಗುಣಗಳಿವೆ ಎಂದು ಅನೇಕಾನೇಕ ಅಧ್ಯಯನಗಳಿಂದ ಸಾಬೀತಾಗಿದೆ. ಅಧಿಕ ಸಂಖ್ಯೆಯ ಅಧ್ಯಯನಗಳು ನಡೆದಿರುವುದು ಪ್ರಯೋಗಶಾಲೆಯಲ್ಲಿ ಮತ್ತು ಪ್ರಾಣಿಗಳಲ್ಲಿ. ಮಾನವರಲ್ಲಿ ನಡೆದ ಅಧ್ಯಯನಗಳು ಕೆಲವೇ ಕೆಲವು. ಆದ್ದರಿಂದ ರೋಗ ಚಿಕಿತ್ಸೆಗೆ ಬೇಕಾಗುವ ನಿರ್ದಿಷ್ಟ ಪ್ರಮಾಣ ತಿಳಿದಿಲ್ಲ. ಕ್ಯಾನ್ಸರ್, ಡಯಾಬಿಟಿಸ್, ಆಲ್ಜೈಮರ್ಸ್ (Alzheimer's), ಮುಂತಾದ ಹಲವಾರು ರೋಗಗಳ ಚಿಕಿತ್ಸೆಗೆ ಅರಿಸಿನವನ್ನು ಉಪಯೋಗಿಸುವುದು ಮಾನವರಲ್ಲಿ ಫಲಕಾರಿಯೇ ಎಂದು ತಿಳಿಯಲು ಬಹಳಷ್ಟು ಅಧ್ಯಯನಗಳು ನಡೆಯುತ್ತಿವೆ. ಫಲಿತಾಂಶ ಆಶಾದಾಯಿಕವಾಗಿದೆ.

ಆರೋಗ್ಯ ರಕ್ಷಣೆಗೆ ಎಷ್ಟು ಬೇಕು?

ಯುನೈಟೆಡ್ ಸ್ಟೇಟ್ಸ್ ನ ಮೇರಿಲ್ಯಾಂಡ್ ಮೆಡಿಕಲ್ ಸೆಂಟರ್ ಯುನಿವರ್ಸಿಟಿ, ಇದುವರೆಗೆ ನಡೆದ ಹಲವಾರು ಅಧ್ಯಯನಗಳನ್ನು ಪರಿಶೀಲಿಸಿ ಈ ರೀತಿ ಹೇಳಿಕೆ ಕೊಟ್ಟಿದೆ - ಆರೋಗ್ಯ ರಕ್ಷಣೆಗೆ ಒಬ್ಬರಿಗೆ ಒಂದು ದಿನಕ್ಕೆ ಅರ್ಧ ಅಥವಾ ಒಂದು ಟೀಸ್ಪೂನ್ (1 ರಿಂದ 3 ಗ್ರಾಂ) ಅರಿಸಿನದ ಪುಡಿ ಬೇಕು ಮತ್ತು ಪ್ರತಿದಿನ ಸೇವಿಸಬೇಕು.

ಅಪಾಯ ಮತ್ತು ಮುನ್ನೆಚ್ಚರಿಕೆ

ಅರಿಸಿನವನ್ನು ಔಷಧಿಯಂತೆ ಸಣ್ಣ ಪ್ರಮಾಣದಲ್ಲಿ ಉಪಯೋಗಿಸಬೇಕು. ದಿನಕ್ಕೆ ಒಂದೆರಡು ಟೀಸ್ಪೂನ್ (3-6 ಗ್ರಾಂ) ಅರಿಸಿನವನ್ನು ಆಹಾರ ಪದಾರ್ಥಗಳಲ್ಲಿ ಮತ್ತು ಪಾನೀಯಗಳಲ್ಲಿ ಉಪಯೋಗಿಸಬಹುದು. ಆದರೆ ಅರಿಸಿನದ, ಅರಿಸಿನದ ಎಣ್ಣೆಯ ಅಥವಾ ಕರ್ಕ್ಯುಮಿನ್ ಮಾತ್ರೆಗಳನ್ನೂ, ಕ್ಯಾಪ್ಸೂಲ್ಸ್ ಗಳನ್ನೂ ಸೇವಿಸಬಾರದು. ಅತಿ ಹೆಚ್ಚು ಸೇವನೆಯಿಂದ ಅಪಾಯವಿದೆ. ಗರ್ಭಿಣಿಯರು, ಎದೆಹಾಲೂಡಿಸುವವರು, ವಾರ್ಫಾರಿನ್ (warfarin) ಅಥವಾ ಆಸ್ಪಿರಿನ್ (aspirin) ಮಾತ್ರೆ ಸೇವಿಸುವವರು, ರಕ್ತದಲ್ಲಿ ಕಬ್ಬಿಣದ ಕೊರತೆ ಇರುವವರು ಅರಿಸಿನವನ್ನು ನೇರವಾಗಿ ಸೇವಿಸುವುದು ಅಪಾಯಕಾರಿ.

ನೀವು ಅರಿಸಿನದ/ಕರ್ಕ್ಯುಮಿನ್ ಮಾತ್ರೆಗಳನ್ನು ಸೇವಿಸುತ್ತಿದ್ದರೆ ಈ ವಿಷಯವನ್ನು ನಿಮ್ಮ ಡಾಕ್ಟರಿಗೆ ತಿಳಿಸಿ. ಏಕೆಂದರೆ ಈ ಮಾತ್ರೆಗಳು ಡಯಾಬಿಟಿಸ್ ಮತ್ತು ಹೃದಯರೋಗಗಳಿಗೆ ತೆಗೆದುಕೊಳ್ಳುವ ಮಾತ್ರೆಗಳ ಪ್ರಭಾವವನ್ನು ಹೆಚ್ಚಿಸಿ ಪ್ರತಿಕೂಲ ಪರಿಣಾಮ ಉಂಟಾಗುವಂತೆ ಮಾಡುತ್ತವೆ.

ಒಂದು ಆರೋಗ್ಯದಾಯಕ ಪಾನೀಯ

ಈ ಪಾನೀಯಕ್ಕೆ ಕೊಬ್ಬುಳ್ಳ ಹಾಲನ್ನೇ ಉಪಯೋಗಿಸಿ. ಏಕೆಂದರೆ ಕರ್ಕ್ಯುಮಿನ್ ಕೊಬ್ಬಿನಲ್ಲಿ ಮಾತ್ರ ಕರಗುತ್ತದೆ. ಕರ್ಕ್ಯುಮಿನ್ ರಕ್ತಗತವಾಗಲು, ಕಾಳುಮೆಣಸಿನಲ್ಲಿರುವ ಪೈಪರಿನ್ ಸಹಕರಿಸುತ್ತದೆ.

ಒಂದು ಲೋಟ ಕಡಿಮೆ ಕೊಬ್ಬುಳ್ಳ ಹಾಲನ್ನು (low fat milk) ಬಿಸಿ ಮಾಡಿ, 1/2 - 1 ಟೀಸ್ಪೂನ್ (ಅಲ್ಲೆಪ್ಪಿ) ಅರಿಸಿನ, 1/8 – 1/4 ಟೀಸ್ಪೂನ್ ಕರಿಮೆಣಸಿನ ಪುಡಿ, ರುಚಿಗೆ ಬೆಲ್ಲ ಅಥವಾ ಜೇನುತುಪ್ಪ ಸೇರಿಸಿ, ಬಿಸಿಯಿದ್ದಾಗಲೇ ಸವಿಯಿರಿ.

ಉಕ್ತಿ: ಆಹಾರವೇ ನಿನಗೆ ಔಷಧಿಯಾಗಲಿ, ಔಷಧಿಯೇ ನಿನ್ನ ಆಹಾರವಾಗಲಿ – ಹಿಪೋಕ್ರಟೀಸ್ *(c.460-370BCE) ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಟ್ರಿಣ್ಲೋಫೋಬಿಯಾ

ಟ್ರಿಣ್ ಎಂದಿತು ಫೋನು.

ನಮ್ಮ ಮನೆಗೆ ಆಗಮಿಸಿದ್ದ ಫೋನಿನ ಮೊಟ್ಟಮೊದಲ ಫೋನ್‌ಕಾಲನ್ನು ರಿಸೀವಿಸಲು ತರಾತುರಿಯಿಂದ ಹೋದೆ.

'ಹರೀ...' ಎಂದಿತು ಆ ಕಡೆಯ ದನಿ. ನಮ್ಮ ಮನೆಯಲ್ಲಿ ಆ ಹೆಸರಿನವರು ಯಾರೂ ಇರಲಿಲ್ಲ. ಪ್ರಥಮ ಚುಂಬನಂ ದಂತಭಗ್ನಂ ಎಂದಂತೆ ಪ್ರಥಮ ಫೋನ್‌ಕಾಲುಂ ರಾಂಗು ನಂಬರುಂ!

'ಹರೀ...' ಮತ್ತೆ ಉಲಿಯಿತು ದನಿ. ಗಡಿಯಾರದತ್ತ ನೋಡಿದೆ. ರಾತ್ರಿ ಹತ್ತರ ಸಮಯ.

'ಐ ಆಮ್ ಇನ್ ನೋ ಹರಿ. ಐ ಆಮ್ ಗೋಯಿಂಗ್ ಟು ಬೆಡ್' ಎನ್ನುತ್ತಾ ಫೋನ್ ಕುಕ್ಕಿದೆ.

ಮರುದಿನ ಬೆಳಗ್ಗೆ ಮತ್ತೊಮ್ಮೆ ಟ್ರಿಣ್... ಮತ್ತೊಮ್ಮೆ 'ಹರೀ...'

'ಹರಿಯಲ್ಲ' ಎಂದೆ.

'ನರಹರೀ...'

'ನರವನ್ನೂ ಹರಿಯಲ್ಲ'

'ನರಹರೀ ಬೇಕಪ್ಪಾ'

'ನರ ಹರೀಬೇಕಾದರೆ ಯಾವುದಾದರೂ ನ್ಯೂರೋಸರ್ಜನ್ನಿಗೆ ಫೋನ್ ಮಾಡಿ. ದಯವಿಟ್ಟು ಈ ನಂಬರಿಗೆ ಮತ್ತೆ ರಿಂಗ್ ಮಾಡಬೇಡಿ' ಎನ್ನುತ್ತಾ ಫೋನ್ ಕುಕ್ಕಿದೆ.

ಕೆಲವು ದಿನಗಳ ನಂತರ ಕೊಂಚ ತಡವಾಗಿ ಮನೆಗೆ ಹಿಂದಿರುಗಿದ ನನ್ನನ್ನು ಎಲ್ಲರೂ ವಿಚಿತ್ರವಾಗಿ ನೋಡುತ್ತಾ ದೂರ ಸರಿಯಲಾರಂಭಿಸಿದರು. 'ಏನೋ ಕಳ್ತನ ಮಾಡಿದೀಯಾಂತ ಪೊಲೀಸ್ ಸ್ಟೇಷನ್ನಿಂದ ಫೋನ್ ಬಂದಿತ್ತು. ಯಾರದೋ ವಾಚ್ ಕದ್ದಿದೀಯಂತೆ?' ಅಣ್ಣನ ಮಗಳು ಮುದ್ದುಮುದ್ದಾಗಿ, ಮೆಲ್ಲನೆ ದನಿಯಲ್ಲಿ ಹೇಳಿದಳು.

ರಾತ್ರಿಯೆಲ್ಲಾ ನಿದ್ರೆಯಿಲ್ಲದೆ ಕಳೆದು ಬೆಳಗ್ಗೆ ಬೇಗನೆ ಠಾಣೆಗೆ ಹೋದೆ. 'ಪಿಸಿ 108, ಆಕೋ ಇವನ್ನ ಒಳೀಕೆ' ಎಂದ ಅಲ್ಲಿದ್ದ ದಫೇದಾರ. 'ಯಾವ ವಾಚು? ಏನು ಕಥೆ?' ಎಂದು ಕೇಳುತ್ತಾ ನನ್ನ ವಿಸಿಟಿಂಗ್ ಕಾರ್ಡ್ ಕೊಟ್ಟೆ.

'ಏಯ್ ಪಿಸಿ; ಒಸಿ ತಡಿಯೋ. ಇಲ್ಲೇನೋ ಯತ್ವಾಸ ಅದೆ' ಎನ್ನುತ್ತಾ ತಾನು ಬರೆದುಕೊಂಡಿದ್ದ ನಂಬರಿಗೆ ನನ್ನ ನಂಬರ್ ಹೋಲಿಸಿದ. ನಂಬರಿನ ಎಲ್ಲ ಸಂಖ್ಯೆಗಳೂ ತಾಳೆಯಾಗುತ್ತಿದ್ದವು, ಮೊದಲ ಸಂಖ್ಯೆಯೊಂದನ್ನು ಬಿಟ್ಟು!

ಪ್ರತಿ ಫೋನ್‌ಗೆ ಒಂದು ನಂಬರ್ ಇರುತ್ತದೋ ಇಲ್ಲವೋ, ಆದರೆ ಪ್ರತಿ ಫೋನ್‌ಗೂ ಒಂದು ರಾಂಗ್ ನಂಬರ್ ಅಂತೂ ಇದ್ದೇಯಿರುತ್ತದೆ. ಫೋನ್ ನಂಬರ್ಗಳು ಎಂಗೇಜ್ ಆಗಿರುತ್ತವೆ. ಆದರೆ ರಾಂಗ್ ನಂಬರ್ಗಳು ಒಂದು ದಿನವೂ ಎಂಗೇಜ್ ಆಗಿರುವುದಿಲ್ಲ! ಮನೆಯಲ್ಲಿ ಫೋನಿನಲ್ಲಿ ಆ ರೀತಿ ವ್ಯವ'ಹರಿ'ಸಿದ ನಾನು ನನ್ನ ಕಚೇರಿಗೆ ಹೋದೆ. ಫೋನ್ ಟ್ರಿಣ್ ಎಂದಿತು.

'ಗಣಪತಿರಾಜಾ...' ಎಂದಿತೊಂದು ಹೆಣ್ಣಿನ ದನಿ.

'ಗಣಪತಿರಾಣಿ' ಎಂದೆ. ಪ್ರಿಂಟ್ ಮಾಡಲು ಆಗದಂತಹ, ಪಾರ್ಲಿಮೆಂಟಿನಲ್ಲಿ ಮಾತ್ರ ಕೇಳಿಬರುವಂತಹ ಅವಾಚ್ಯ ಶಬ್ದಗಳ ಸರಮಾಲೆಯನ್ನು ಅರ್ಪಿಸಿ ಫೋನ್ ಕುಕ್ಕಿದಳು ಆ ಲಲನಾಮಣಿ.

ಸ್ವಲ್ಪ ಹೊತ್ತಿನಲ್ಲಿ ಮತ್ತೊಮ್ಮೆ ಟ್ರಿಣ್. ಈ ಬಾರಿ ಗೊಗ್ಗರುದನಿಯೊಂದು 'ಗಣಪತೀನಾ?' ಎಂದಿತು. 'ನನ್ನ ಹೊಟ್ಟೆಯೇನೋ ದೊಡ್ಡದೇ ಇದೆ. ಸಾಕಷ್ಟು ತಿಂಡಿಪೋತನೂ ಹೌದು. ಆದರೂ ಗಣಪತಿಯಲ್ಲ' ಎಂದೆ. ಲಲನಾಮಣಿಯ ಸಹಸ್ರನಾಮಾರ್ಚನೆಯ ಗಂಡುದನಿಯ ಆಕ್ಷನ್ ರಿಪ್ಲೇ ಆಯಿತು. ವಾಸ್ತವವಾಗಿ ಗಣಪತಿರಾಜ ಎಂಟರ್ಪ್ರೈಸಸ್ ಎಂಬ ಗ್ಯಾಸ್ ಕಂಪನಿಯ ಫೋನಿನ ಕೊನೆಯ ಸಂಖ್ಯೆ 9 ಮತ್ತು ನನ್ನ ಆಫೀಸಿನ ಫೋನಿನ ಸಂಖ್ಯೆ 8 ಆಗಿದ್ದು, ವಾಸ್ತು ಪ್ರಕಾರ ಬೆರಳು ಇಲ್ಲದವರು ಡಯಲ್ ಮಾಡಿದಾಗಲೆಲ್ಲ ಈ ಪರಿಸ್ಥಿತಿ ಮರುಕಳಿಸುತ್ತಿತ್ತು.

ಸುಮಾರು ವಾರಗಳು ರಾಂಗ್ ಕಾಲ್‌ಗಳು ಬರಲಿಲ್ಲವೆಂದು ಸಂತೋಷದಿಂದಿದ್ದೆ. ಅಂದು, ಭಾನುವಾರ, ಮನೆಯಲ್ಲೇ ಇದ್ದೆ. ಫೋನ್ ರಿಂಗಣಿಸಿತು.

'ರಾಮನ್ ತಾನೇ?' ಇಂದ್ರಲೋಕದ ಸುರಸುಂದರಿಯರೆಲ್ಲ ಜಗದ ಸಕಲ ಕೋಗಿಲೆಗಳ ಕಂಠಗಳನ್ನು ಬಾಡಿಗೆಗೆ ಪಡೆದು ಒಂದೇ ಬಾರಿ ಉಲಿದರೆ ಎಷ್ಟು ಮಧುರವಿರಬಹುದೋ ಅಷ್ಟು ಮಧುರವಾದ ದನಿ.

'ಹೌದು, ನಾನೇ'

'ಏಯ್ ರಾಮನ್, ನಾನು ಕಣೋ ಶರ್ಮಿಳಾ...' ಆ ಕಂಠದಲ್ಲಿದ್ದ ಮಾದಕತೆಗೆ, ಕೇಳಿದಾಕ್ಷಣ ಏರುವ ನಶೆಯ ಮುಂದೆ ಈ ಗಾಂಜಾ, ಚರಸ್, ಅಫೀಮುಗಳು ಏರಿಸುವ ನಶೆ ಚಿಲ್ರೆ ಅಂದ್ರೆ ಚಿಲ್ರೆ.

ಮುಂದಿನ ಪುಟ ನೋಡಿ ...

‘ಶರ್... ಶರ್ಮಿ...’ ತೊದಲಿದೆ.

‘ಏಯ್, ಯಾವಾಗಲೂ ಕರೆಯೋಹಾಗೆ ಶರ್ಮೀ... ಅನ್ನೋ’ ಮಾದಕತೆ ಇನ್ನೊಂದು ಫ್ಲೋರ್ ಮೇಲೇರಿತು.

‘ಆದರೆ... ಶರ್ಮೀ...’

‘ಏಯ್, ನೆನ್ನೆ ಕಬ್ಬನ್ ಪಾರ್ಕಲ್ಲಿ ಅವನು ಕೊಟ್ಟ ಕಡಲೇಕಾಯಿಬೀಜ ಎಷ್ಟು ಗರಮ್ ಆಗಿತ್ತಲ್ವಾ...’

‘ಹೂ. ನಿನ್ನ ಹಾಗೇ...’ ಕತ್ತಲಲ್ಲಿ ಒಂದು ಕಲ್ಲೆಸೆದೆ.

‘ನಿನ್ನ ಹಾಗೇ...? ಯಾವಾಗಲೂ ನಿನ್ನ ಹಾಗೇ ಡಾರ್ಲಿಂಗ್ ಅಂತಿದ್ದೋವ್ನು ಈಗ ಯಾಕೆ ಡಾರ್ಲಿಂಗ್ ಅನ್ನಲಿಲ್ಲ ರಾಮನ್?’ ದನಿಯಲ್ಲಿ ಕಂಪನ.

‘ಅದೂ... ಅದೂ...’

‘ರಾಮ್ನಾಥಾ... ಬಾರೋ ಸ್ವಲ್ಪ ಒಳಗೇ...’ ಕೂಗಿದರು ನನ್ನ ಪಿತಾಮಹ. ಪಕ್ಕದ ಬೀದಿಯವರಿಗೂ ಸಲೀಸಾಗಿ ಕೇಳಿಸುವ ಆ ಕಂಠ ಫೋನಿನ ಆ ತುದಿಗೆ ಮಟ್ಟದಿದ್ದೀತೇ?

‘ರಾಮ್ನಾಥಾ...? ಯೂ ಆರ್ ನಾಟ್ ರಾಮನ್...?’ ಮಾರ್ದವತೆಯ ತಂಪು ಅನುಮಾನದ ಬಿಸಿಗೆ ಕರಗುತ್ತಿತ್ತು.

‘ಅಲ್ಲ. ಆದರೆ...’

‘ಯೂ ಬ್ಲಡಿ ಫೆಲೋ...#$&***#** ಸಿಕ್ಕಸಿಕ್ಕ ಲೇಡೀಸ್ ಹತ್ರ ಚಕ್ಕಂದ ಆಡ್ತೀಯಾ... ಯೂ #$&***#**/^**..’ ಪಕ್ಕಾ ರೌಡಿಗಳು, ಪೊಲೀಸರು ಸಹ ಬಳಸಲು ಹಿಂದೆಮುಂದೆ ನೋಡುವ ಪದಪುಂಜಗಳು ಪುಂಖಾನುಪುಂಖವಾಗಿ ಆ ನಿಟ್ಟಿನಿಂದ ಹರಿದುಬಂದವು. ಫೋನ್ ಕುಕ್ಕಿದೆ.

ಮರುದಿನ ನನ್ನ ಅವಸ್ಥೆಗಳನ್ನೆಲ್ಲ ಹಂಚಿಕೊಂಡು ಹಗುರಾಗಲು ಗೆಳೆಯ ಪುಂಡರೀಕನ ಮನೆಗೆ ಹೋದೆ. ನಾನು ಬಾಯಿ ಬಿಡುವುದಕ್ಕೆ ಮುಂಚೆಯೇ ‘ಕೇಳಿಲ್ಲಿ. ನನ್ನ ಮನೆಯ ಫೋನ್ ನಂಬರಿನ ಹಿಂದಿನ ನಂಬರ್ ವಾಟರ್ ಸಪ್ಲೈ ಡಿಪಾರ್ಟ್‌ಮೆಂಟ್‌ದು’ ಎಂದ ಪುಂಡರೀಕ.

‘ಏನು ತೊಂದರೆ?’

‘ಮಧ್ಯರಾತ್ರಿಯಲ್ಲಿ, ಇನ್ನೇನು ನಿದ್ರೆಗೆ ಜಾರಬೇಕು ಅನ್ನೋವಾಗ ಫೋನ್ ಟ್ರಿಣ್ ಅನ್ನತ್ತೆ. ಎತ್ತಿದರೆ ‘ಕಂಟ್ರೋಲ್ ವಾಲ್ವ್ ಥರ್ಟೀನ್ ಕ್ಲೋಸ್ ಮಾಡು. ವಸಂತಪುರಕ್ಕೆ ನಾಳೆ ನೀರಿಲ್ಲ’ ಅನ್ನತ್ತೆ ಒಂದು ದನಿ. ಸ್ವಲ್ಪ ಹೊತ್ತಿಗೆ ಮತ್ತೊಂದು ಟ್ರಿಣ್. ‘ಹಲೋ’ ಅನ್ನಕ್ಕೆ ಮುಂಚೇನೇ ‘ಏಯ್ ಸ್ಟುಪಿಡ್ ಫೆಲೋ, ಹದಿಮೂರು ಕ್ಲೋಸ್ ಮಾಡು ಅಂದ್ರೆ ಹನ್ನೆರಡು ಕ್ಲೋಸ್ ಮಾಡಿದೀಯಲ್ಲೋ. ನಾನು... ಎಕ್ಸಿಕ್ಯುಟಿವ್ ಎಂಜಿನಿಯರ್ರು.. ನನ್ನ ಮನೇ ನೀರನ್ನೇ ನಿಲ್ಸಕ್ಕೆ ಸ್ಕೆಚ್ ಹಾಕ್ತೀಯಾ’ ಅಂತ ಬೈಗುಳ. ‘ಸಾರ್, ರಾಂಗ್ ನಂಬರ್ ಡಯಲ್ ಮಾಡಿದೀರ’ ಅಂತ ಹೇಳಕ್ಕೆ ಹೋದರೆ ‘ಮಾಡೋ ಕೆಲ್ಸ ಮಾಡಿ ಸುಳ್ಬೇರೆ ಹೇಳ್ತೀಯಾ... ನಿನ್ನ ಗೊಗ್ಗರುದನಿ ನನಗೆ ಗೊತ್ತಿಲ್ವೇನೋ ಸಿದ್ದಯ್ಯಾ’ ಅಂತಾರೆ. ನೀನೇ ಹೇಳು. ರಾತ್ರಿ ನಿದ್ರೆಯಿಂದ ಎದ್ದಾಗ ದನಿ ಗೊಗ್ಗರಿಲ್ಲದೆ ಎಂ.ಎಸ್. ಸುಬ್ಬಲಕ್ಷ್ಮಿ ದನಿ ತರಹ ಇರಕ್ಕೆ ಸಾಧ್ಯಾನಾ...?’ ಅಂದ.

‘ಬ್ಯಳ್ಳನೆ ಬ್ಯಳ್ಗೆ ನಮ್ಮೇರಿಯಾದಾಗೆ ನೀರು ಅರ್ದೋಯ್ತಾ ಅದೆ ಸಾಮಿ. ರಾತ್ರೇಲ್ಲಾ ನೀರು ಆಳಾತು ಅಂತ ಫೋನ್ ಮಾಡ್ತಾರೆ ದಣೀ’ ದನಿ ಸೇರಿಸಿದಳು ಪುಂಡರೀಕನ ಭಾರ್ಯೆ.

‘ಕರೆಂಟ್ ಡಿಪಾರ್ಟ್‌ಮೆಂಟ್‌ದು ಇನ್ನೊಂದು ಕಥೆ’ ಪುಂಡರೀಕ ಮುಂದುವರೆಸಿದ. ‘ನನ್ನ ಮನೆಯ ಫೋನ್ ನಂಬರಿನ ಮುಂದಿನ ನಂಬರ್ ಎಲೆಕ್ಟ್ರಿಸಿಟ್ ಡಿಪಾರ್ಟ್‌ಮೆಂಟಿನದು. ಈ ನೀರಿನವರ ವರಾತವೆಲ್ಲ ಮುಗಿಸಿ, ನೈಟ್‌ಡ್ಯೂಟಿ ವಾಚ್‌ಮನ್‌ಗಳು ಆಗಾಗ್ಗೆ, ಅಷ್ಟಷ್ಟೇ ತೂಕಡಿಸೋ ತರಹ ತೂಕಡಿಸಿರ್ತೀನಿ. ಫೋನ್ ಟ್ರಿಣ್ ಅನ್ನತ್ತೆ. ಎತ್ತಿದರೆ ‘ಗ್ರಿಡ್ ಚೇಂಜ್ ಮಾಡಪ್ಪ. ಇಸ್ರೋಲೇಪೆಟ್ಟು ಕಟ್ ಮಾಡಿ ವಿಠಲ್‌ನಗರಕ್ಕೆ ಹಾಕು’ ಅಂತ ಆದೇಶ ಬರತ್ತೆ. ಆಮೇಲೆ ಒಂದೇ ಸಮ ‘ಸಾ ಕರೆಂಟ್ ಏಟೊತ್ತಿಗೆ ಬತ್ತೈತೆ’; ‘ಎಟ್ ವಾಟ್ ಟೈಂ ವಿಲ್ ದ ಪವರ್ ರೆಸ್ಯೂಮ್’; ‘ಎಕ್ಸಾಮ್ ಟೈಮಲ್ಲಿ ಕರೆಂಟ್ ತೆಗೀಬಾರ್ದೂಂತ ಗೊತ್ತಾಗಲ್ವೇನ್ರೀ..’ ಅನ್ನೋ ಕರೆಗಳು ಬೆಳಗ್ಗೆ ಆರುಗಂಟೆಯವರೆಗೆ ಬರ್ತಾ ಇರತ್ವೆ. ಸರಿಯಾಗಿ ನಿದ್ರೆ ಮಾಡಿ ಎರಡು ವರ್ಷ ಆಯಿತು. ಅಪ್ಪಿತಪ್ಪಿ ನಿದ್ರೆ ಮಾಡಿದರೆ ಕನಸಿನಲ್ಲೂ ಟ್ರಿಣ್ ಅಂದ್ಹಾಗಾಗಿ ‘ಅಯ್ಯೋ... ಟ್ರಿಣ್ ಅಂತು... ಅಂತ ಎದ್ಬಿಡ್ತೀನಿ.’

‘ಫೋನ್ ಎತ್ತಿಟ್ಬಿಟು ಮಲಕ್ಕೋ’

‘ಎಂಗಾಯ್ತದೆ? ನಮ್ಮಣ್ಣ ಅಮೆರಿಕದಾಗೆ ಅವ್ನೆ. ಅವನು ಫೋನಚ್ಚೋದೇ ಬ್ಯಳ್ಗಿನ್ ಝಾವ’ ಶ್ರೀಮತಿ ಪುಂಡರೀಕ ಉವಾಚ.

ಪುಂಡರೀಕನ ಕಷ್ಟಕ್ಕೆ ಹೋಲಿಸಿದರೆ ನಾನೇ ವಾಸಿ ಎಂದುಕೊಳ್ಳುತ್ತಾ ಮನೆಯತ್ತ ಪಾದ ಬೆಳೆಸಿದೆ. ▪

ವಿಚಾರ ವಿಹಾರ

ಮಾಲು, ಅಡಿಲೈಡ್

ನಡವಳಿಕೆ

ಭೋಧಿಸತ್ವ ಒಂದು ಬಾರಿ ಒಬ್ಬ ಸನ್ಯಾಸಿಯಾಗಿ ಜನ್ಮ ತಾಳಿದ. ಎಲ್ಲೂ ನಿಲ್ಲದ ಅವಧೂತನಾದ. ಯೋಗ ಮಾಡುತ್ತಾ, ಅಂತರ್ಮುಖಿಯಾಗಿ ಧ್ಯಾನ ಮಾಡುತ್ತಾ ಮತ್ತು ಶಾಂತಿಯಿಂದ ದೈವವನ್ನು ಹುಡುಕುತ್ತಾ ಎಲ್ಲ ಕಡೆಯೂ ತಿರುಗುತ್ತಿದ್ದ.

ಹೀಗೆ ತಿರುಗುತ್ತಿದ್ದಾಗ, ಒಂದು ರಾಜ್ಯದಲ್ಲಿ ಕಾಲಿಡಬೇಕಾಗಿ ಬಂದಿತು. ಮಳೆಗಾಲದ ಜೋರು ಮಳೆಗೆ ತೋಯ್ದು ಹೋಗಿದ್ದ. ಇವನ ವರ್ಚಸ್ಸನ್ನು ಗಮನಿಸಿದ ರಾಜ ಭಟರು ತಮ್ಮ ರಾಜನಿಗೆ ಭೋಧಿಸತ್ವನ ಬಗ್ಗೆ ತಿಳಿಸಿದರು.

ಸ್ವತಃ ರಾಜನೇ ಭೋದಿಸತ್ವನನ್ನು ಬಂದು ಸ್ವಾಗತಿಸಿ, ಅವನನ್ನು ಒಂದು ಒಳ್ಳೆಯ ತಾಣಕ್ಕೆ ಕರೆದುಕೊಂಡುಹೋಗಿ, ಅವನಿಗೆ ಬೆಚ್ಚನೆಯ ಹೊದಿಕೆ ಮತ್ತು ಆಹಾರವನ್ನು ಕೊಟ್ಟನು. ಅವನ ಯೋಗಕ್ಕೆ ಮತ್ತು ದಿನ ನಿತ್ಯದ ಕರ್ಮಗಳಿಗೆ ಅನುಕೂಲವಾಗುವಂತೆ ಒಂದು ಕುಟೀರವನ್ನು ಏರ್ಪಾಟು ಮಾಡಿದ. ಸಂತೃಪ್ತನಾದ ಭೋಧಿಸತ್ವನು ಆ ರಾಜನನ್ನು ಸೂಕ್ಷ್ಮವಾಗಿ ಗಮನಿಸಿದ. ಏನೋ ಒಂದು ತರಹದ ಚಿಂತೆ ರಾಜನ ಮುಖದಲ್ಲಿ ಕಂಡ.

'ಎಲೈ, ರಾಜ ನಿನ್ನ ಈ ಸುಭಿಕ್ಷ ರಾಜ್ಯದಲ್ಲಿ ಎಲ್ಲವೂ ಇವೆ. ಆದರೂ ಏಕೆ ಚಿಂತಾಕ್ರಾಂತನಾಗಿದ್ದೇಯೆ' ಎಂದನು ರಾಜನು ಮತ್ತೊಮ್ಮೆ ಭೋಧಿಸತ್ವನಿಗೆ ನಮಸ್ಕರಿಸಿ.

'ಸ್ವಾಮಿಯೇ, ಏನೆಂದು ಹೇಳಲಿ ನನ್ನ ದುರಾದೃಷ್ಟ. ನನಗೆ ದೇವರು ಒಬ್ಬ ಸುಂದರ ಮಗನನ್ನು ದಯಪಾಲಿಸಿದ್ದಾನೆ. ಆದರೆ, ಅವನು ನಡವಳಿಕೆ ಉತ್ತಮವಾದುದಲ್ಲ, ಜನಗಳಿಗೆ ಹಿಂಸಿಸುತ್ತಾನೆ, ತಾಯಿಗೆ ನಿಂದನೆ ಮಾಡುತ್ತಾನೆ, ಕೆಟ್ಟ ಅಭ್ಯಾಸಗಳಿಗೆ ಬಲಿಯಾಗಿದ್ದಾನೆ, ಅವನ ವಯಸ್ಸು ಕೇವಲ ಇನ್ನೂ ೧೨' ಎಂದು ಕಣ್ಣೀರನ್ನು ಹರಿಸಿದ.

ಶಾಂತ ಚಿತ್ತನಾದ ಭೋಧಿಸತ್ವನು ರಾಜನ ಹೆಗಲ ಮೇಲೆ ಕೈಯನಿಟ್ಟು 'ಎಲೈ ದೊರೆಯೇ, ನಾಳೆ ಬೆಳಿಗ್ಗೆ ನಿನ್ನ ಪುತ್ರನನ್ನು ಇಲ್ಲಿಗೆ ಕರೆದು ತಾ' ಎಂದು ತಿಳಿಸಿ ಧ್ಯಾನ ಮಗ್ನನಾದನು.

ಮಾರನೆಯ ದಿನ ರಾಜನು ತನ್ನ ಮಗನ ಸಹಿತ ಭೋಧಿಸತ್ವನನ್ನು ಕಾಣಲು ಬಂದನು. ಧ್ಯಾನದಲ್ಲಿ ಇದ್ದ ಭೋದಿಸತ್ವನು ನಿಧಾನವಾಗಿ ಕಣ್ಣು ತೆರೆದು ರಾಜನ ಮಗನ ಕಡೆ ದೃಷ್ಟಿ ಇಟ್ಟನು. ಉದ್ಧಟನಾದ ರಾಜ ಪುತ್ರನು ಅಸಡ್ಡೆಯಿಂದ ಭೋಧಿಸತ್ವನನ್ನು ನೋಡುತಿದ್ದ. ಭೋದಿಸತ್ವನು ಅವನನ್ನು ಬಳಿಗೆ ಕರೆದು 'ಎಲೈ ಬಾಲಕ, ಇಲ್ಲಿ ಬಾ' ಎಂದು ತಿಳಿಸಿ ಅಲ್ಲಿಯೇ ಇದ್ದ ಮರದ ಒಂದು ಮರದ ಎಲೆಯನ್ನು ಆ ಬಾಲಕನ ಕೈಗೆ ಇತ್ತು ಬಾಯಿಯಲ್ಲಿ ಇಟ್ಟು ಜಗಿಯಲು ತಿಳಿಸಿದ. ರಾಜನಾದ ತನ್ನ ತಂದೆಯ ಭಯದಿಂದ ಭೋದಿಸತ್ವನು ಹೇಳಿದ ಹಾಗೆ ಬಾಯಿಯಲ್ಲಿ ಇಟ್ಟು ಎರಡು ಬಾರಿ ಜಗಿದ. ಇನ್ನು ಹೆಚ್ಚು ಜಗಿಯಲು ಆಗದೆ ಆ ಎಲೆಯನ್ನು ಉಗುಳಿದ.

ಆ ಬಾಲಕನು ಕೋಪದಿಂದ ಭೋದಿಸತ್ವನ ಕಡೆ ತಿರುಗಿ 'ಎಲೈ ಸನ್ಯಾಸಿಯೆ, ಏಕೆ ಈ ಕಹಿಯಾದ ಎಲೆಯನ್ನು ನನಗೆ ಜಗಿಯಲು ತಿಳಿಸಿದೆ' ಎಂದನು. ಶಾಂತ ಚಿತ್ತದಿಂದ ಭೋದಿಸತ್ವನು

'ಪ್ರಿಯ ಬಾಲಕನೆ, ನಿನಗೆ ಕೊಟ್ಟ ಎಲೆಯು ಇನ್ನೂ ಬಲಿತಿರದ ಎಳೆಯ ಎಲೆ. ಅದು ಈಗಲೇ ಅಷ್ಟು ಕಹಿ. ಅದು ಇನ್ನಷ್ಟು ಬಲಿತರೆ ಇನ್ನೂ ಕಹಿಯಾಗುತ್ತದೆ. ನೀನು ಇನ್ನು ಚಿಕ್ಕವ, ಈಗಲೇ ನಿನ್ನ ಕೆಟ್ಟ ನಡವಳಿಕೆಯಿಂದ ನಿನ್ನ ಸುತ್ತಲಿನ ಜನಗಳಿಗೆ ತೊಂದರೆ ಕೊಡುತ್ತೀಯ.ನೀನು ದೊಡ್ಡವನಾದಾಗ ಇನ್ನಷ್ಟು ಕೆಟ್ಟ ನಡವಳಿಕೆಯನ್ನು ಮೈಗೂಡಿಸಿಕೊಂಡು ನಿನ್ನ ರಾಜ್ಯಭಾರದಲ್ಲಿ ಜನರಲ್ಲಿ ಅಸಹನೆಯನ್ನು ಬೆಳೆಸುತ್ತೀಯ. ಅವರು ನಿನಗೆ ತಿರುಗಿಬಿದ್ದು ನಿನ್ನ ಮತ್ತು ನಿನ್ನ ಪದವಿಯನ್ನು ನಿರ್ಣಾಮ ಮಾಡುತ್ತಾರೆ. ನೀನು ಈಗಲೇ ನಿನ್ನ ನಡವಳಿಕೆಯನ್ನು ತಿದ್ದಿಕೊಳ್ಳಬೇಕು' ಎಂದು ತಿಳಿಸಿದ.

ರಾಜ ಪುತ್ರ ಸ್ವಲ್ಪ ಹೊತ್ತು ಯೋಚಿಸಿ, ಭೋದಿಸತ್ವನ ಕಾಲಿಗೆ ನಮಿಸಿ ತನ್ನ ನಡವಳಿಕೆಯನ್ನು ಬದಲಿಸಲು ಸಹಾಯ ಮಾಡಲು ವಿನಂತಿಸಿದನು. ರಾಜನ ಮತ್ತು ರಾಜ ಪುತ್ರನ ವಿನಂತಿಯನ್ನು ಮನ್ನಿಸಿ, ಅದೇ ರಾಜ್ಯದಲ್ಲಿ ಇದ್ದು, ರಾಜನ ಪುತ್ರನನ್ನು ಒಬ್ಬ ಉತ್ತಮ ವ್ಯಕ್ತಿಯಾಗಿ ರೂಪಿಸಿ ಮತ್ತೆ ತನ್ನ ಯಾತ್ರೆಯನ್ನು ಮುಂದುವರೆಸಿದ. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ

ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್

ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು

ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ

ಇವರ "ಮಂದಹಾಸ"

ಮಹಾಂತೇಶ್ ಸಿ.

ಇವರ "ಹಂಗ ಸುಮ್ನ್..."

ಟಾಸ್ಮೇನಿಯ ರಾಜ್ಯ ಪುಷ್ಪ – ಟಾಸ್ಮೇನಿಯನ್ ಬ್ಲೂ ಗಮ್

ಆಸ್ಟ್ರೇಲಿಯಾದ ಹೂವುಗಳು

ಮಾಹಿತಿ ಸಂಗ್ರಹ: ಬದರಿ ತ್ಯಾಮಗೊಂಡ್ಲು

- ಆಸ್ಟ್ರೇಲಿಯಾದ ರಾಜ್ಯವೊಂದಾದ ಟಾಸ್ಮೇನಿಯಾದ ಪುಷ್ಪ ಲಾಂಛನವಾಗಿರುವ ಟಾಸ್ಮೇನಿಯನ್ ಬ್ಲೂ ಗಮ್ ಎನ್ನುವ ಈ ಪುಷ್ಪದ ಸಸ್ಯಶಾಸ್ತ್ರೀಯ ಹೆಸರು "ಯೂಕಲಿಪ್ಟಸ್ ಗ್ಲಾಬ್ಯುಲಸ್"
- ಸುಮಾರು ೭೦ ಅಡಿಗಳಷ್ಟು ಬೆಳಯಬಲ್ಲ ಈ ಮರವು, ಸುಮಾರು ಎರಡು ಮೀಟರ್ ಸುತ್ತಳತೆ ಹೊಂದಿರುವ ಕಾಂಡವುಳ್ಳದ್ದು
- ಮೇಣದಂತಹ ಮೇಲ್ಮೈ ಮತ್ತು ಹಸಿರು-ಬೂದು ಬಣ್ಣದ ಎಲೆಗಳುಳ್ಳ ಈ ಮರವು ಭಾರತದಲ್ಲಿ ಹೇರಳವಾಗಿ ಸಿಗುವ ನೀಲಗಿರಿ ಮರದ ಪ್ರಬೇಧವೇ ಆಗಿದೆ.
- ಟಾಸ್ಮೇನಿಯ ರಾಜ್ಯದ ಪುಷ್ಪ ಲಾಂಛನವಾಗಿ ನವೆಂಬರ್ ೨೭ ೧೯೮೨ ರಲ್ಲಿ ಅಂಗೀಕರಿಸಲಾಯಿತು.
- ಟಾಸ್ಮೇನಿಯ ರಾಜ್ಯ ಹೊರತುಪಡಿಸಿದರೆ, ವಿಕ್ಟೋರಿಯ ರಾಜ್ಯದ ದಕ್ಷಿಣ ತುದಿಯಲ್ಲೊಂದಷ್ಟು ಮಾತ್ರ ನೈಸರ್ಗಿಕವಾಗಿ ಕಾಣಬರುತ್ತದೆ.
- ಬುಗುರಿಯಾಕಾರಾದ ಮೊಗ್ಗುಗಳು ಕೆನಬಣ್ಣದ ಹೂವುಗಳಾಗಿ ಅರಳುತ್ತವೆ.
- ಮಿಟ್ಸೇಸಿ ಗುಂಪಿಗೆ ಸೇರಿದ ಈ ಗಿಡದಲ್ಲಿ ಸುಮಾರು ೮೦೦ ಪ್ರಬೇಧಗಳಿವೆ ▪

ಬುಗುರಿಯಾಕಾರದ ಮೊಗ್ಗು ಮತ್ತು ಬ್ಲೂ ಗಮ್ ಹೂವು

ಬ್ಲೂ ಗಮ್ ಹೂವಿರುವ ಒಂದು ಸ್ಟ್ಯಾಂಪ್

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಮದರ್ಸ್ ಡೇ

ಕನಕಾಪುರ ನಾರಾಯಣ

ತಾಯಿಗೆ ಅವಳ ಮಮತೆ, ಮಹತ್ವಕ್ಕೆ ಗೌರವ ಸೂಚಿಸುವ ದಿನವೆಂದು ಮಗನೊಬ್ಬ ನೂರಾರು ಮೈಲು ದೂರದಲ್ಲಿದ್ದ ಅಮ್ಮನಿಗೆ ಹೂವಿನಗುಚ್ಚವನ್ನು ಪಾರ್ಸಲ್ ಮಾಡಲೆಂದು ಹೂವಿನ ಅಂಗಡಿಗೆ ತನ್ನ ಹೊಸ ಕಾರಿನಲ್ಲಿ ಬಂದ. ಅಲ್ಲೊಬ್ಬ ಪುಟ್ಟ ನಿರ್ಗತಿಕ ಬಾಲಕಿ ಈ ಮಗನಿಗೆ ಕೈಚಾಚಿ ಒಂದು ಡಾಲರ್ ಗಾಗಿ ಭಿಕ್ಷೆ ಬೇಡಿದಳು. ಕಾರಣವೇನೆಂದು ಕೇಳಲು ಆಕೆ ತನ್ನ ತಾಯಿಗೆ ಒಂದು ಹೂ ಕೊಂಡುಕೊಡಬೇಕು ಎಂದಳು. ಒಂದೇ ಡಾಲರ್ ಸಾಕೆ? ಎಂದುಕೊಳ್ಳುತ್ತಾ ಅನುಮಾನದಿಂದ ಡಾಲರನ್ನು ಕೊಡದೆ ಮಗನು ಒಂದು ಹೂವನ್ನೇ ಕೊಡಿಸಿದ.

ಆ ಬಾಲಕಿ "ದಯಮಾಡಿ ಸ್ವಲ್ಪ ದೂರ ಡ್ರಾಪ್ ಮಾಡ್ತೀರಾ ಎರಡುಮೈಲಿ ನಡೆದು ಹೋಗಬೇಕು ಅಮ್ಮನಿಗೆ ಹೂ ಕೊಡಲು" ಎಂದಳು. ಸರಿ, ಬಂದ ಕೆಲಸ ತಾಯಿಗೆ ಹೂ ಪಾರ್ಸೆಲ್ ಮಾಡಿದ್ದಾಗಿದೆ, ವಾಪಸ್ಸಾಗುವ ದಾರಿಯಕಡೆಯೇ ಕೈತೋರಿಸುತ್ತಿದ್ದಾಳೆ "ಸರಿ ನಡಿ ಡ್ರಾಪ್ ಮಾಡ್ತೀನಿ" ಎಂದನು. ಕಾರಿನಲ್ಲಿ ಎರಡುಮೈಲಿ ತಲುಪಲು ಹೆಚ್ಚು ಸಮಯವಾಗಲಿಲ್ಲ "ಹಾ ಇಲ್ಲೇ ಇಲ್ಲೇ" ಎಂದು ತಡೆದು, ಕಾರ್ ನಿಂತ ತಕ್ಷಣವೇ ಬಾಗಿಲು ತೆರೆದು ಒಡಿದಳು,...ಎಲ್ಲಿಗೆ ?... ಪ್ರಶಾಂತ ಸ್ಥಳದಲ್ಲಿ ಶಾಂತವಾಗಿ ಮಲಗಿದ್ದ ತಾಯಿಯ ಸಮಾಧಿಯ ಕಡೆಗೆ! ಮಗನಿಗೆ ಮೈ ಝಳ್ ಎಂದಿತು, ಥಟ್ಟನೆ ಕಾರನ್ನು ಅಂಗಡಿಯ ಕಡೆ ಓಡಿಸಿ, ತಾನು ಮಾಡಿದ್ದ ಪಾರ್ಸೆಲ್ ರದ್ದುಮಾಡಿ, ಒಂದು ಹೂಗುಚ್ಚವನ್ನು ಕೊಂಡು ತಾನೇ ಖುದ್ದಾಗಿ ಅಮ್ಮನನ್ನು ಕಾಣಲು ಹೊರಟ. ▪

ರೆಸಿಪಿ ಕೊಡ್ತೀರಾ!

ಸೌತೇಕಾಯಿ ಸಿಹಿದೋಸೆ / ಕೆರ್ಕತ್ತಿಗೆ ತೀಪೆದೋಸೆ(ಉಡುಪಿ ಶೈಲಿ)

ಬೇಕಾಗುವ ಸಾಮಗ್ರಿಗಳು

- ಅಕ್ಕಿ ಮೂರುಲೋಟ
- ಸೌತೇಕಾಯಿತುರಿ ಎರಡು ಲೋಟ
- ತೆಂಗಿನಕಾಯಿ ತುರಿ ಮುಕ್ಕಾಲು ಲೋಟ
- ಬೆಲ್ಲದ ಪುಡಿ ಒಂದುಲೋಟ
- ಉಪ್ಪು ಒಂದು ಚಮಚ

ಮಾಡುವ ವಿಧಾನ

- ಅಕ್ಕಿ ಎರಡು ಘಂಟೆ ನೆನೆಸಿ ತೊಳೆದು ರುಬ್ಬಿ
- ರುಬ್ಬುವಾಗ ತರಿತರಿಯಾಗಿದ್ದಾಗ ಕಾಯಿ,ಬೆಲ್ಲ,ಉಪ್ಪು ಹಾಕಿ ನುಣ್ಣಗೆ ರುಬ್ಬಿ
- ಸೌತೇಕಾಯಿ ತುರಿ ಬೆರೆಸಿ ಕಾದ ಕಾವಲಿಗೆ ಎಣ್ಣೆ ಸವರಿ ದೋಸೆ ಹುಯ್ಯಿರಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ಒಗಟು

೧. ಎಲ್ಲಾ ಕಾಲದಲ್ಲೂ ಹಸಿರಾಗೆ ಇರುತ್ತೆ
೨. ಕೆಂಪು ಹುಡುಗನಿಗೆ ಹಸಿರು ಟೋಪಿ

ಉತ್ತರಕ್ಕೆ ಪುಟ ೧೪ ನೋಡಿ

ಭಾವಾನುಭಾವ ...

ಯಾವ ಭಾವವ ಸುರಿದು
ಯಾವ ಹಾಡನು ಬರೆದು
ಯಾವ ನೆನಪನು ಕರೆದು
ನನ್ನ ನೋವನು ಅಳಿಸಲಿ

ಯಾವ ಸ್ಮೃತಿಯನು ತೆರೆದು
ಯಾವ ಕೃತಿಯನು ತೆಗೆದು
ಯಾವ ಶ್ರುತಿಯನು ಹಿಡಿದು
ಚೆನ್ನ ವೀಣೆಯ ನುಡಿಸಲಿ

ಯಾವ ಮುಖವನು ನೆನೆದು
ಯಾವ ಸಖನನು ಕರೆದು
ಯಾವ ಸುಖವನು ತೊನೆದು
ನನ್ನ ಒಲವನು ಹರಿಸಲಿ

ಯಾವ ವ್ಯಥೆಯನು ಎಳೆದು
ಯಾವ ಕಥೆಯನು ಬರೆದು
ಯಾವ ಚಿತೆಯಲಿ ಉರಿದು
ನನ್ನ ಜೀವವ ಬೆರೆಸಲಿ

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. ಸಾಹಿತಿ, ಪತ್ರಿಕೋದ್ಯಮಿಯಾಗಿದ್ದು, ಕನ್ನಡದ ಜಾಗೃತಿ, ಕರ್ನಾಟಕದ ಏಕೀಕರಣಕ್ಕೆ ಹೋರಾಡಿದವರು ಇವರು. ಕನ್ನಡ ಸಾಹಿತ್ಯ ಪರಿಷತ್ತಿನ ಉದಯಕ್ಕೆ ಕಾರಣರೂ ಆದವರು. ಕನ್ನಡದ ಕುಲಪುರೋಹಿತರೆಂದು ಹೆಸರುಗಳಿಸಿದ ಇವರು ಯಾರು?

೨.ಕುವೆಂಪು, ಮಾಸ್ತಿ, ತೀನಂಶ್ರೀ, ಜಿ.ಪಿ.ರಾಜರತ್ನಂ ಮುಂತಾದ ಖ್ಯಾತ ಸಾಹಿತಿಗಳಿಗೇ ಗುರುವಾಗಿ, ಮಾರ್ಗದರ್ಶಕರೂ ಆಗಿ, ಕನ್ನಡ/ಇಂಗ್ಲೀಷ್ ಅಧ್ಯಾಪಕರೂ, ಪ್ರಾಧ್ಯಾಪಕರೂ ಆಗಿದ್ದು, ತಮ್ಮ ಜೀವಿತಕಾಲವನ್ನು ಕನ್ನಡದ ಸಾಹಿತ್ಯಕ್ಕಾಗಿ ಮುಡುಪಾಗಿಟ್ಟಿದ್ದು, ಕನ್ನಡದ ಕಣ್ವ ಎಂದು ಹೆಸರು ಪಡೆದವರು ಯಾರು?

ಸರಿ ಉತ್ತರಕ್ಕೆ ಪುಟ ೨೧ ನೋಡಿ

ಒಗಟು – ಉತ್ತರ

೧. ಗಿಣಿ ೨. ಕೆಂಪು ಮೆಣಸಿನಕಾಯಿ

ಹಾಸ್ಯ ಚಿಲುಮೆ

ಹುಡುಗ: ತೆಂಗಿನ ಮರ ಹತ್ತಿದರೆ ಇಂಜಿನಿಯರಿಂಗ್ ಕಾಲೇಜ್ ಹುಡುಗೀರು ಕಾಣ್ತಾರೆ

ಹುಡುಗಿ: ಅಲ್ಲಿಂದ ಬಿದ್ರೆ ಮೆಡಿಕಲ್ ಕಾಲೇಜ್ ಹುಡುಗೀರೂ ಕಾಣ್ತಾರೆ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧.ಇದಕ್ಕಾಗಿಯೇ ಅಲ್ಲವೆ ಬಹಳಷ್ಟು ವೇಷ.

	■	

೨. ಮಂಗಳಾರತಿಯ ಸಂಗಾತಿಯಾದದ್ದು ಈ ನಿನಾದ.

■			

೩.ಜಾತ್ರಾ ಮಹೋತ್ಸವದಲ್ಲಿ ಎಲ್ಲರ ನಂಟಾಗಿದ್ದು ಈ ಕಾಯಿಲೆ.

	■		

೪. ಶ್ರೀ ರಂಗನಾಥನಿಗೆ ನಿಮಿಷಗಳಷ್ಟೇ ದೂರದಲ್ಲಿ ಕಾವೇರಿಯ ಸನಿಹದಲ್ಲಿರುವ ತಾಯಿ.

■			

೫. ಸಾಲ ತಂದು ಕೈಗೆ ಹಾಕಬೇಕೆ ಈ ಆಭರಣ.

■	■	

೬. ಆಸೆಗಳೆಲ್ಲಾ ಇದರೊಳಗಿನ ಗಂಟಾಗಿ ಹೋಯಿತೆ?

	■	

ಉತ್ತರ: ಗಂಟಿನಲ್ಲಿ ಅಡಗಿದೆಯೇ ನಮ್ಮ ತಾಯ್ನುಡಿಯ ಪದ ಮತ್ತು ಅರ್ಥಗಳ ಕೋಶ?

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಮಾರ್ಚ್ ೨೫ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಫೆಬ್ರವರಿ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಅನು ಶಿವರಾಮ್, ಸಿಡ್ನಿ
- ಸೌಮ್ಯ ಎಸ್, ಸಿರಾ
- ರಾಜೇಶ್ವರಿ, ಸಿಡ್ನಿ
- ಹರಿಣಿ ರಾವ್, ನವದೆಹಲಿ

ಫೆಬ್ರವರಿ ತಿಂಗಳ ಪದಪುಂಜದ ಉತ್ತರ

೧. ಬೆರಳುಗಳಿಂದ ತಟ್ಟಿ ಅಣಿಮಾಡುವ ಉರುವಲಿನ ಮೂಲ ವಸ್ತು.

ಸ	ಗ	ಣಿ

೨. ಈ ಹುಡುಗಿಯ ಧ್ವನಿ ಹರಿಯುವ ನೀರಿನಂತೆ ಸುಮಧುರವಿರಬಹುದೆ?

ಮಂ	ಜು	ಳ

೩. ಪಾಪ ತೊಳೆಯುವವಳನ್ನು ತಲೆಯಮೇಲೆಯೇ ಕುಳ್ಳಿರಿಸಿಕೊಂಡಿರುವ ಈತ.

ಗಂ	ಗಾ	ಧ	ರ

೪. ದೆಬ್ಬೆ ಕಟ್ಟಿದರೂ ನೆಟ್ಟಗಾಗದಿದು.

ನಾ	ಯಿ	ಬಾ	ಲ

೫. "ನಿನಗೆ ಬೇಕಾದುದೇನು, ನನ್ನ ಒಲವೆ?" ಎಂದರೆ "ಬೇಡ, ಅದನ್ನು ನಡುವಲ್ಲಿ ಬದಲಾಯಿಸಿ ಕೊಡು" ಎಂದಳಲ್ಲಾ ಜಾಣೆ.

ಒ	ಡ	ವೆ

ಉತ್ತರ: ಮುಷ್ಕರ ಹೂಡುವ ಜಾಗವೇನಲ್ಲ ಇದು, ಇದರ ನಡುವಲ್ಲಿ ಮೆರೆಯುತ್ತಿದೆ ನಮ್ಮ ಕರ್ನಾಟ ದೇಶ.

ಧ	ರ	ಣಿ	ಮಂ	ಡ	ಲ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಢಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ಕುಂದಣಮಯವಾದ ರಂಗೋಲಿ

ರಚನೆ: ಶ್ರೀಮತಿ ರಶ್ಮಿ ಸೋಮಶೇಖರ್, ಬೆಂಗಳೂರು

ಅಸಾದುಲ್ಲ ಬೇಗ್ ಅವರ ಶಾಯರಿಗಳು

ಗೆಳತಿ

ಪ್ರಕೃತಿ ಅಂದಾಗ
ನೆನಪಾಗುವುದು...
ಸೂರ್ಯನ ಕಿರಣ
ಸಮುದ್ರದ ಅಲೆ,
ಚಂದ್ರನ ಬೆಳದಿಂಗಳು !

ಗೆಳತಿ ಅಂದಾಗ
ನೆನಪಾಗುವುದು....
ನೀನು
ನಿನ್ನ ನಗುವಿನ ಅಲೆ
ನಿನ್ನ ಸುಂದರ ಕಣ್ಗಳು !!

ಪರಿಹಾಸ

ಯಾರ ಪರಿಹಾಸಕ್ಕೂ
ಮನವೀಗ
ನೋಯುವುದಿಲ್ಲ ;

ಅವನಿಗಿಂತ
ಮಿಗಿಲಾದ
ಪರಿಹಾಸ
ಇನ್ನೊಬ್ಬನೇನು ಮಾಡಬಲ್ಲ !

ಪಾಕಪ್ರವೀಣೆಯಾದ ನಮ್ಮ ಅತ್ತೆ, ಮಕ್ಕಳು ಮೊಮ್ಮಕ್ಕಳಿಂದ ಉತ್ತೇಜಿತರಾಗಿ ತಮ್ಮ ಅಮೂಲ್ಯ ನಳಪಾಕದ ಜ್ಞಾನವನ್ನು ಬೇರೆಯವರಿಗೂ ಹಂಚಿ, ಲೋಕ ಕಲ್ಯಾಣ ಮಾಡಬೇಕೆಂಬ ಉದ್ದೇಶದಿಂದ "ಅಡಿಗೆ ಮಾಡಿ ನೋಡಿ.ಕಾಂ" ಬ್ಲಾಗ್ ಒಂದನ್ನು ಶುರು ಮಾಡೇ ಬಿಟ್ಟರು. ಅದರ ಉಧ್ಘಾಟನೆ ಮಾರ್ಚ್ ತಿಂಗಳಲ್ಲಿ ತನ್ನ ಅಮೇರಿಕಾ ಮೊಮ್ಮಕ್ಕಳು, ಮಗ ಸೊಸೆ, ಮಗಳು ಅಳಿಯ ಇವರುಗಳ ಮುಂದೆ ಎಂದು ಘೋಷಿಸಿ ಬಿಟ್ಟರು. ಮೊಮ್ಮಗ ಅಮೇರಿಕಾದಿಂದ ತಂದ ಹೊಸ ಲ್ಯಾಪ್ಟಾಪ್ನಲ್ಲಿ ಕನ್ನಡ ಲಿಪಿಯಲ್ಲಿ ಹೊಸ ಹೊಸ ಖಾದ್ಯಗಳು ಬಿಸಿ ಬಿಸಿಯಾಗಿ ಬ್ಲಾಗಿನ ತಟ್ಟೆಯಲ್ಲಿ ಬಂದು ಕೂತವು. ಓದಿದರೆ ಸಾಕು, ತಿಂದಷ್ಟೇ ತೃಪ್ತಿ ಕೊಡುವ ಅವರ ವಿವರಣೆ ಬ್ಲಾಗನ್ನು ವಿಶ್ವವಿಖ್ಯಾತಿ ಗೊಳಿಸುವುದರಲ್ಲಿ ಸಂದೇಹವೇ ಇಲ್ಲ.

ಮೊದಲನೇ ತಿಂಡಿ " ಊರ್ವಶಿ ಉಪ್ಪಿಟ್ಟು " ತ್ರಿಲೋತ್ತಮೆಯರಾದ ಊರ್ವಶಿ, ರಂಬೆ ಮತ್ತು ಮೇನಕೆಯರು, ತಮ್ಮ ಸ್ವರ್ಗಲೋಕದ ಡಾನ್ಸ್ ಕೆಲಸಕ್ಕೆ ರಿಸೈನ್ ಮಾಡಿ, ಹೋಟೆಲ್ ಇಟ್ಟರೇನೋ ಎಂಬ ಅನುಮಾನ ಅಂತು ಬರುತ್ತೆ ಓದುಗನಿಗೆ. ಊರ್ವಶಿ ಪ್ರಾವಿಶನ್ ಸ್ಟೋರ್ಸ್ನಿಂದ ತಂದ ಹುಳಭರಿತ ರವೆ, ನೀವು ಮಾಂಸಾಹಾರಿಗಳು ಎಂದರೆ, ಮಾಡುವ ವಿಧಾನ ಸುಲಭ, ಆದರೆ ಸಸ್ಯಾಹಾರಿಗಳೆಂದರೆ, ರವೆಯಿಂದ ಹುಳಗಳನ್ನು ಬೇರ್ಪಡಿಸಬೇಕಾಗುತ್ತೆ. ಚೆನ್ನಾಗಿ ಹುರಿದು, ಫ್ರಿಡ್ಜಿನಲ್ಲಿ ಅಳಿದುಳಿದ ತರಕಾರಿ ಸೇರಿಸಿ, ಬಿಸಿ ನೀರಲ್ಲಿ ಬೇಯಿಸಿ. ಕೊಲೆಸ್ಟ್ರಾಲ್ ಇಲ್ಲದಿದ್ದ ಪಕ್ಷದಲ್ಲಿ, ಕಾಯಿ ಹಾಕಿ, ಕೊನೆಗೆ ನಿಂಬೆ ಹಣ್ಣು ಮತ್ತು ಕೊತ್ತಂಬರಿ ಸೇರಿಸಿದರೆ, ಆಹಾ ಆ ಬ್ರಹ್ಮ ಕೂಡ ಭೂಲೋಕಕ್ಕೆ ಬಂದಾನು ಬ್ರೇಕ್ ಫಾಸ್ಟ್ ಗೆ!!

ಎರಡನೇ ಖಾದ್ಯ "ಸರೋಜಾ ಸಜ್ಜಿಗೆ". ಅತ್ತೆ, ಅದೇನು ಸಜ್ಜಿಗೆ ಮುಂದೆ ಸರೋಜಾ ಇದೆಯಲ್ಲಾ ಅಂದ್ರೆ, ನಮ್ಮ ಸರೋಜಾ ತುಂಬಾ ಚೆನ್ನಾಗಿ ಸಜ್ಜಿಗೆ ಮಾಡೋಳು, ಅವಳಿಂದ ಕಲಿತಿದ್ದು ಕಣೋ ಎಂಬ ಉವಾಚ.

ಸಣ್ಣರವೆ ಹುರಿದು, ಧಾರಾಳವಾಗಿ ಸಕ್ಕರೆ ಮತ್ತು ತುಪ್ಪ ಬೆರೆಸಿ ಬೇಯಿಸಿದರೆ ಸಜ್ಜಿಗೆ ರೆಡಿ. ಆದರೆ ತಿನ್ನೋ ಮೊದಲು ನಿಮಗೆ ಸಕ್ಕರೆ ಖಾಯಿಲೆ ಇಲ್ಲ ಅಂತ ತಿಳಿದುಕೊಂಡು ತಿನ್ನಿ.

ಅಲ್ಲ ಅತ್ತೆ, ಸಕ್ಕರೆ ಖಾಯಿಲೆ ಇರೋವ್ರು ಯಾಕೆ ಸಿಹಿ ಮಾಡೋದನ್ನ ಕಲಿತ್ಕೋ ಬೇಕು ಹೇಳು.

ಸಕ್ಕರೆ ಖಾಯಿಲೆ ಇದ್ದರೇನೋ, ರೆಸಿಪಿ ಓದಾದರೂ ಸಂತೃಪ್ತಿಗೊಳ್ಳಲಿ ಬಿಡು.

ಮೂರನೇ ತಿಂಡಿ "ಚೆನ್ನಾರಿ ಚಿತ್ರಾನ್ನ". ತಂಗಳು ಅನ್ನಾನೆ ಆಗಬೇಕು ನೋಡಿ ಇದಕ್ಕೆ. ಈರುಳ್ಳಿ, ಮೆಣಸಿನಕಾಯಿ ಜೊತೆ ಸಾಸಿವೆ ಚಟ್ ಪಟ್ ಅನ್ನಿಸಿ, ಕಡ್ಲೆ ಕಾಯಿ ಒಗ್ಗರಣೆ ಹಾಕಿದಾ ಅಂದ್ರೆ, ಚೆನ್ನಾರಿ ನೀನು ಮಾಡಿದ ಚಿತ್ರಾನ್ನ ಚೆನ್ನಾರಿ ಅಂತ ಹೇಳ್ಬೇಕು ಗಂಡ !!

ಅತ್ತೆ, ಈಗೆಲ್ಲಾ ಹಳೆ ಸಾಂಪ್ರದಾಯಿಕ ತಿಂಡಿಗಳ ಯುಗವಲ್ಲ, ಎಲ್ಲರಿಗೂ ಹೊಸ ಹೊಸ ರುಚಿ ಬೇಕು, ಪಿಜ್ಜಾ, ಪಾಸ್ತಾ, ಬರ್ಗರ್ ತರೇವಾರಿ ತಿಂಡಿ ಚಪ್ಪರಿಸೋ ಮಕ್ಕಳು ಹೆಚ್ಚುತ್ತಾ ಇದ್ದಾರೆ. ನಿನ್ನ ಬ್ಲಾಗ್ನಲ್ಲಿ ಅದನ್ನೂ ಸೇರಿಸು.

ಈಗಿನ ಮಕ್ಕಳು, ಮೂರೊತ್ತು ಫಾಸ್ಟ್ ಫುಡ್ ತಿಂದು ತಿಂದು ಬೇಜಾರಾಗಿ ನನ್ನ ಬ್ಲಾಗ್ ತಿಂಡಿ ಮಾಡಿಕೊಂಡು ತಿಂತಾರೆ ಬಿಡು. ಯಾವತ್ತೂ ನಮ್ಮ ಹಳೆ ಕಾಲದ ತಿಂಡಿಗಳನ್ನು ಜನಮರೆಯಬಾರದಲ್ವೆ. ಅದೇನೋ ಹೇಳಲ್ಲವೇ, ಹಳೇ ಗಂಡನ ಪಾದವೇ ಗತಿ ಅಂತ!!

ನಾಳೆ ಇನ್ನೂ ಕೆಲವು ಹೊಸ ತಿಂಡಿಗಳ ವಿಧಾನ ಟೈಪ್ ಮಾಡಬೇಕು ಕಣೋ. ಹಾಲ್ಬಾಯಿ, ನುಚ್ಚಿನ ಉಂಡೆ,ಚಕ್ಲಿ, ಮುಚ್ಚೋರೆ, ಬಿಸಿಬೇಳೆ ಭಾತು, ವಾಂಗಿಭಾತು ಇಂಡಿಯನ್ ಪಿಜ್ಜಾ ಎಲ್ಲಾ ಸವಿಸ್ತಾರವಾಗಿ ಟೈಪಿಸಬೇಕು.

ಏನತ್ತೆ, ಈಗ ತಾನೇ ಸಾಂಪ್ರದಾಯಿಕ ತಿಂಡಿ ಮಾತ್ರ ಅಂದು ಪಿಜ್ಜಾ ಗಿಜ್ಜಾ...

ನಮ್ಮ ದೋಸೆ ಉತ್ತಪ್ಪಕ್ಕೊಂದು ಹೊಸ ಹೆಸರು ಅಷ್ಟೇ ! ತಿಂಡಿ ಹಳೆದಾದರೂ, ಅದರ ಹೆಸರು ಮಾತ್ರ ಹೊಸದಾಗಿ ಆಕರ್ಷಕ ವಾಗಿರಬೇಕು ನೋಡು. ಓದೋರಿಗೆ, ಮಾಡಿ ತಿನ್ನಬೇಕೆಂಬ ಆಸೆ ಆಗಬೇಕು.

ಮನೆ ಬೆಲ್ ಆಯಿತು ಅಂತ ಕಾಣತ್ತೆ... ಫೋನ್ ಇಡ್ತೀನಿ ಕಣೋ ಸೋಮು, ಬೆಳಿಗ್ಗಿಂದಾ ಬ್ಲಾಗ್ ನಲ್ಲೇ ಸಮಯ ಕಳೆದು, ಅಡಿಗೆ ಮನೆ ಕಡೆನೇ ಹೋಗಿಲ್ಲ. ಪಿಜ್ಜಾ ಡೆಲಿವರಿ ಬಾಯ್ ಬಂದಿದ್ದಾನೆ, ದುಡ್ಡು ಕೊಟ್ಟು ಡೆಲಿವರಿ ತಗೋಬೇಕು !!! ▪

ಪ್ರಾಮಾಣಿಕತೆ

ಲೇಖಕರು:
ವೈ. ಕೆ. ಸಂಧ್ಯಾ ಶರ್ಮ

ಬೆಳಗ್ಗೆ ಸುಮಾರು ಆರುಗಂಟೆಯೂ ಇರಲಿಕ್ಕಿಲ್ಲ. ಹೊರಗೆ ಯಾರೋ ಏರುಕಂಠದಲ್ಲಿ ಮಾತನಾಡುವುದು ಕೇಳಿಸಿತು. ಒಂದೆರಡು ನಿಮಿಷಗಳ ನಂತರ ಮೆಲ್ಲಗೆ ಗೇಟು ತೆರೆದ ಸದ್ದಾಯಿತು. ಬೆಳಗಿನ ಜಾವದ ಸವಿನಿದ್ದೆಯ ಮತ್ತಿನಲ್ಲಿದ್ದ ಸುಂದರಮ್ಮ-`ಇಷ್ಟು ಹೊತ್ತಿನಲ್ಲಿ ಯಾರು?...ನಿಂಗಿ ಬರೋದಕ್ಕೆ ಇನ್ನೂ ಸ್ವಲ್ಪ ಹೊತ್ತು ಹೋಗ್ಬೇಕು...ಹಾಲಿನೋನೂ ಇರಲಾರ...ಮತ್ಯಾರು?!...' ಎಂದುಕೊಳ್ತಾ ಕಣ್ರೆಪ್ಪೆಗಳನ್ನು ಬಲವಂತವಾಗಿ ಕೀಳುತ್ತ, `ಯಾರು.? ಎನ್ನುತ್ತ ಗರ್ಜಿಸಿಕೊಂಡೇ ಹೊರಬಂದರಾಕೆ. ನಿದ್ದೆಕೆಡಿಸಿದವರ ಮೇಲೆ ಉರಿಕಾರಲು ಸಿದ್ಧವಾಗಿ ಕೆರಳಿನಿಂತಿತ್ತು ಅವರ ಕೆಂಪುಗಣ್ಣುಗಳು.

ಬಾಗಿಲು ತೆರೆಯುವ ಮುನ್ನ ಕಟಕಟೆಯಿಂದ ಪರದೆ ಸರಿಸಿ ಬಗ್ಗಿನೋಡಿದರು. ಗೇಟು ಅರ್ಧತೆರೆದು ಹುಡುಗನೊಬ್ಬ ನಿಂತಿದ್ದಾನೆ. ಸುಮಾರು 10-11 ವರ್ಷವಿದ್ದರೆ ಹೆಚ್ಚು. ಕೆದರಿದ ಕೂದಲು, ಕಪ್ಪುಬಣ್ಣ, ಅರಳಿದ ಗೆಡ್ಡೆಕಣ್ಣುಗಳಲ್ಲಿ ಏನೋ ಒಂದು ಬಗೆಯ ದೈನ್ಯಭಾವ.

`ಇನ್ನೂ ಬೆಳಗಾಗಿಲ್ಲ, ಇವಾಗೆಂಥ ಭಿಕ್ಷುಕ ?!'...ಸುಂದರಮ್ಮನಿಗೆ ಅಚ್ಚರಿ ಜೊತೆ ಅತೀವ ಕೋಪವೂ ನುಗ್ಗಿಬಂತು. `ನಡಿಯೋ ಆಚೆ ಕತ್ತೆಭಡವಾ...' ಎನ್ನಲು ತೆರೆದುಕೊಂಡ ಅವರ ತುಟಿಗಳು ಆಶ್ಚರ್ಯದ ಉದ್ಗಾರ ಹೊರಡಿಸಿತು.

ಅವರ ತೀಕ್ಷ್ಣದೃಷ್ಟಿ ಕಚ್ಚಿಕೊಂಡಿದ್ದು ಅವನ ಸೊಂಟದ ಮೇಲಿದ್ದ ದಪ್ಪಗಾತ್ರದ ಮೊಟ್ಟೆ ತೆಂಗಿನಕಾಯಿಯ ಮೇಲೆ. ಅವರ ಎಕ್ಸರೇ ಕಣ್ಣುಗಳು ಆ ಕಾಯಿಯ ಮೇಲೆ ಸರಸರನೆ ಹರಿದಾಡಿತು. ಒಂದೇಕ್ಷಣದಲ್ಲಿ ಆ ಕಾಯಿ ತಮ್ಮ ಮನೆಯದೆಂದು ಆಕೆ ಊಹಿಸಿದ್ದೇನು,ಖಾತ್ರಿಯೇ ಆಗಿಬಿಟ್ಟಿತ್ತು. ಮೂವತ್ತು ವರ್ಷಗಳಿಂದ ನೀರುಹಾಕಿ ಅಕ್ಕರೆಯಿಂದ ಪೋಷಿಸಿದ ಮರ ಅಲ್ಲವೇನು...ಅದರ ಕಾಯಿಯ ರೂಪುರೇಷೆಗಳನ್ನು ನಿದ್ದೆಯಲ್ಲೂ ಗುರುತಿಸುವಷ್ಟು ನಿಷ್ಣಾತರಾಗಿಬಿಟ್ಟಿದ್ದರಾಕೆ. ತಮ್ಮ ತೆಂಗಿನಮರದ ಎಲ್ಲ ಕಾಯಿಗಳ ರೂಪ-ಆಕಾರ-ಗಾತ್ರ-ಬಣ್ಣದ ಸುಪರಿಚಯವಿದ್ದಾಕೆ ಎಂಥ ಸಂತೆಯ ರಾಶಿಕಾಯಿಗಳ ಮಧ್ಯೆಯೂ ತಮ್ಮ ಮನೆಯ ಕಾಯಿಗಳನ್ನು ಸುಲಭವಾಗಿ ಪತ್ತೆಹಚ್ಚುವ ಚಾಕಚಕ್ಯತೆ ಅವರ ಪಿಳಿಚು ಕಣ್ಣುಗಳಿಗಿತ್ತು.

ಹುಡುಗ ಕಾಯಿಯನ್ನು ಅವರತ್ತ ಚಾಚಿನಿಂತಿದ್ದ. ತುಟಿಗಳು ಏನೋ ಉಸುರಲು ಚಡಪಡಿಸುತ್ತಿದ್ದವು. ಕಣ್ಣಾಲಿಗಳು ಅತ್ತಿಂದಿತ್ತ ಚಲಿಸುತ್ತ ಗಲಿಬಿಲಿಯಿಂದ ಹೊಯ್ದಾಡುತ್ತ ತದೇಕದೃಷ್ಟಿಯಿಂದ ಅವರನ್ನೇ ದಿಟ್ಟಿಸುತ್ತಿದ್ದವು.

ಗೋಡೆಯ ಮೊಳೆಗೆ ನೇತುಹಾಕಿದ್ದ ಬೀಗದಕೈಯನ್ನು ತೆಗೆದುಕೊಂಡವರೆ ಸರಸರ ಬಾಗಿಲು ತೆಗೆದು, ದುಡುದುಡು ಮೆಟ್ಟಿಲಿಳಿದು, ಪಟಕ್ಕನೆ ಅವನ ಕೈಯಿಂದ ಕಾಯಿಯನ್ನು ಕಸಿದುಕೊಂಡು ಅದನ್ನು ತಿರುಮುರುಗಿಸಿ ನೋಡಿ `ಇದು ನಮ್ಮನೆ ಕಾಯಲ್ವೇನೋ...ನಿನಗೆ ಹೇಗೆ ಸಿಕ್ತೋ?!- ಎಂದರು.

ಹುಡುಗ ತುಂಬ ಹೆದರಿದಂತೆ ಕಂಡ. ಅವನ ಬಾಯಿಂದ ಒಂದಕ್ಷರವೂ ಹೊರಡಲಿಲ್ಲ. ಮೂಕನಂತೆ ಮನೆಯ ಮುಂದಿನ ಮೋರಿಯತ್ತ ಬೆರಳುಮಾಡಿ ತೋರಿದ. ಕಾಂಪೌಂಡ್ ಹೊರಗೆ ಅಗಲವಾದ ಕಲ್ಲುಚಪ್ಪಡಿಯ ಮೋರಿ. ಸರಿಯಾಗಿ ಮೋರಿಯತ್ತ ವಾಲಿಕೊಂಡಿದೆ ಮರ. ಕಾಯಿಗಳೆಲ್ಲ ಚರಂಡಿಗೆ ಅಥವಾ ರಸ್ತೆಯ ಮೇಲೆ ಉರುಳಿ ಬೀದಿಹೋಕರ ಪಾಲೇ.

`ಈ ಗಿಡಕ್ಕೇನೋ ರೋಗ ಬಡಿದಿರಬೇಕು...ಹಾಗಂತ ಆ ಕಾಯಿ ಕೀಳೋ ರಂಗ ಹೇಳ್ತಿದ್ದ...ಅದಕ್ಕಾಗೇ ಪದೇಪದೇ ಕಾಯಿಗಳು ಯಾವ್ಯಾವ್ಯಾಗಲೋ ಬಿದ್ದುಹೋಗ್ತಿವೆ...' ಎಂದು ಅಲವತ್ತುಕೊಂಡರು. ಆಕೆಗಂತೂ ಸರ್ಯಾಗಿ ನಿದ್ದೆಹತ್ತಿ ಯಾವ ಕಾಲವಾಯ್ತೋ ಈ ಯೋಚ್ನೇಲಿ...ಕಾಯಿ ಬೀಳಕ್ಕೆ ಹೊತ್ತೂ ಗೊತ್ತೂ ಇರಲಿಲ್ಲ. ಮಧ್ಯಾಹ್ನ ಒಂದುಗಳಿಗೆ ಚಾಪೆಗೆ ಮೈಕೊಡಲಿಕ್ಕಿಲ್ಲ, ಹೊರಗೆ ಧಬ್ ಅಂತ ಕಾಯಿಬಿದ್ದ ಸದ್ದು...ಅಷ್ಟರಲ್ಲಿ ಅವರ ಕೋಳಿನಿದ್ದೆ ಹಾರಿಹೋಗ್ತಿತ್ತು. ತಮ್ಮ ಧಢೂತಿ ಗಾತ್ರದ ಶರೀರಾನ ಹೊರಳಿಸಿ ಬುಡಕ್ಕನೆ ಮೇಲೆದ್ದು ಹೊರಬಂದು, ಗೇಟಾಚೆ ಈಚೆ ದುರ್ಬೀನುಗಣ್ಣು ಹಾಯಿಸಿ ಬಿದ್ದಕಾಯಿಯನ್ನು ಪತ್ತೆಮಾಡಿ ಹೆಕ್ಕಿಕೊಂಡು ಬಂದಾಗಲೇ ಸಮಾಧಾನ!...ಹೀಗೆ ಮರದಿಂದ ತಾನಾಗೇ ಕಾಯಿ ಬಿದ್ದುಹೋಗುವ ಕಾರಣ ತಿಳಿಯದೆ ರಂಗನ ಸಲಹೆಯಂತೆ ಮರದ ಬುಡಕ್ಕೆ ಟಾರು ಮೆತ್ತಿಸಿದ್ದರು. ಜೊತೆಗೆ ಗರಿಗಳ ಮೇಲೆ ಮತ್ತು ಮರದ ಬುಡಕ್ಕೂ ಔಷಧವನ್ನು ಹಾಕಿಸಿದ್ದರು. ಇಷ್ಟಾದರೂ ಕಾಯಿ ಬೀಳೋದು ನಿಂತಿರಲಿಲ್ಲ. ರಾತ್ರಿಯೆಲ್ಲ ಆಕೆಗೆ ಕಾಯಿ ಬೀಳೋದೇ ಚಿಂತೆ. ಕನಸಿನಲ್ಲೂ ಧಬ್ ಧಬ್ ಶಬ್ದ ಕೇಳಿದಂತಾಗಿ ಬೆಚ್ಚಿಬಿದ್ದು ಎದ್ದುಕೂಡುತ್ತಿದ್ದರು. ಈಕೆಯ ಕಾಯಿ ಮೇನಿಯಾ ಬಗ್ಗೆ, ಊರಿಂದಬಂದ ಮಗ ಹಾಸ್ಯಮಾಡುತ್ತ ಗಂಭೀರವಾಗಿಯೇ ಸಲಹೆನೀಡಿದ್ದ.

`ಅಮ್ಮನ್ನ ಯಾರಾದ್ರೂ ಸೈಕಿಯಾಟ್ರಿಸ್ಟ್ ಹತ್ರ ಕರ್ಕೊಂಡೋಗಪ್ಪಾ...ಆಮೇಲೆ ಇದೇ ಗೀಳು ಹಿಡಿದ್ರೆ ಕಷ್ಟ ...ಷೀ ನೀಡ್ಸ್ ಕೌನ್ಸಲಿಂಗ್...ಅಥವಾ ಅವಳು ಕೆಲ ದಿನ ನಮ್ಮೂರಿಗೆ ಬಂದಿರಲಿ...ಷೀ ನೀಡ್ಸ್ ಎ ಛೇಂಜ್' ಎಂದಾಗ ಸುಂದರಮ್ಮ ಮುಖಗಂಟಿಕ್ಕಿ-` ನಿನಗೇನು ಗೊತ್ತು ಈ ಮರದ ಅಟ್ಯಾಚ್‌ಮೆಂಟು....ನೀ ಹುಟ್ಟೋಕ್ಕೆ ಮುಂಚೆನಿಂದ್ಲೂ ನಾನಿದನ್ನು ಚೊಚ್ಚಿಲುಮಗನ ಥರಾನೇ ಬೆಳೆಸಿದ್ದೇನೆ' ಎಂದು ಅವನ ಬಾಯಿ ಮುಚ್ಚಿಸಿದರು. ಹಾಗಿತ್ತು ತೆಂಗಿನಮರದೊಡನೆ ಆಕೆಯ ಬಾಂಧವ್ಯ.

ಮುಂದಿನ ಪುಟ ನೋಡಿ ...

ತಾಯಿಯ ಈ ವರಾತ-ಗೀಳು ಕಂಡು ರಜಕ್ಕೆ ಬಂದಿದ್ದ ಮಗಳೂ ಇರಲಾರದೆ ಒಂದು ಮಾತು ಅಂದು ದೊಡ್ಡ ಪ್ರಳಯವೇ ಸೃಷ್ಟಿಯಾಗಿತ್ತು. `ಎಲ್ಲ ಕಡೆ ಈ ತೆಂಗಿನಮರಗಳ ಕಾಯಿ-ಗರಿಗಳು ಬಿದ್ದು ಅನಾಹುತಗಳೇ ನಡೆದುಹೋಗ್ತಿವೆ...ಬೀದೀಲಿ ಹೋಗೋರ ತಲೆಮೇಲೆ ಬಿದ್ದು ಏನಾದ್ರೂ ಪ್ರಾಣಾಗೀಣ ಹೋಗಲಿ ಆಗ ಗೊತ್ತಾಗತ್ತೆ, ಅದರ ತಾಪತ್ರಯ. ಮೊನ್ನೆ ಪೇಪರ್ನಲ್ಲಿ ಓದಿದ್ದೆ, ಕಾಯಿ ಕೀಳೋನು ಮರದಿಂದ ಬಿದ್ದು, ಮನೆಯೋರು 2 ಲಕ್ಷ ರೂಪಾಯಿ ಕಾಂಪೆನ್ಸೇಷನ್ ಕೊಟ್ರಂತೆ...ಯಾಕ್‌ಬೇಕು ಗ್ಯಾಚಾರ, ಸುಮ್ನೆ ಮರ ಕಡಿಸಿಹಾಕಿ, ನಿಶ್ಚಿಂತೆ...' ಎಂದದ್ದೇ ತಡ ಸುಂದರಮ್ಮ ಆಕಾಶ-ಭೂಮಿ ಒಂದು ಮಾಡಿದ್ದರು.

ಯಾರೇನೇ ಶಂಖ ಊದಿದರೂ ಯಥಾಪ್ರಕಾರ ಸುಂದರಮ್ಮ ಬೆಳಗ್ಗೆದ್ದ ತಕ್ಷಣ ಮಾಡೋ ಮೊದಲ ಕೆಲಸವೆಂದರೆ ಗೇಟಾಚೆ ಬಂದು ಮೋರೀಲಿ ಬಗ್ಗಿ ನೋಡೋದು, ಮತ್ತೆ ಕಾಂಪೌಂಡಿನ ಉದ್ದಗಲಕ್ಕೂ ಕಣ್ಣುಹಾಸಿ ಕಾಯೇನಾದರೂ ರಾತ್ರಿ ತಮ್ಮ ಕಿವಿ-ಕಣ್ಣು ತಪ್ಪಿಸಿ ಬಿದ್ದಿರಬಹುದೇ ಎಂಬ ಹುಡುಕಾಟ ನಡೆಸುವುದು. ನಿಜವಾಗಿ ಒಂದು ದೊಡ್ಡ ತಲೆನೋವೇ ಆಗಿಹೋಗಿತ್ತು ಆಕೆಗೆ ಈ ಕಾಯಕ ಅಥವಾ ಈ ತನಿಖೆ. ಅರ್ಧರಾತ್ರೀಲಿ ಕಾಯಿಬಿದ್ದ ಶಬ್ದವಾದ್ರೆ ಆ ಅವೇಳೆಯಲ್ಲಿ ಎದ್ದು ಹೊರಗೆಬಂದ್ರೆ ಗಂಡ ಸುಮ್ಮನಿರುತ್ತಿರಲಿಲ್ಲ..ಜೊತೆಗೆ ಆಕೆಗೂ ದಿಗಿಲೇ...ಮನೆಯಲ್ಲಿ ಮುದುಕ-ಮುದುಕಿ ಇಬ್ಬರೇ. ಹೀಗಾಗಿ ಅರ್ಧರಾತ್ರೀಲಿ ಕಳ್ಕೊಂಡ ಕಾಯಿಗಳ ಬಗ್ಗೆ ಬರೀ ನಿಟ್ಟುಸಿರು ಬಿಡುವುದಷ್ಟೇ ಆಗಿತ್ತು.

ಒಂದುದಿನ ಮೂಲೆಮನೆ ಜಲಜಮ್ಮ-`ಅವತ್ತು, ದ್ವಾದಶಿ ಬೆಳಗ್ಗೆ 5 ಗಂಟೆಗೆ ನಮ್ಮತ್ತೆಯವರ ವೈದೀಕಾಂತ ನಾವು ಗಂಡ-ಹೆಂಡ್ತಿ ಇಬ್ಬರೂ ಮಠದ ಕಡೆಗೆ ಹೋಗ್ತಾ ಇದ್ವಿರೀ, ಆಗ ನಿಮ್ಮನೆ ಮುಂದೆ ಯಾರೋ ನಿಂತಿದ್ದಹಾಗಿತ್ತು. ಆ ವ್ಯಕ್ತಿ ನಿಮ್ಮನೆ ಮೋರೀಲಿ ಬಗ್ಗಿ ಅದರೊಳಗೆ ಬಿದ್ದಿದ್ದ ಎರಡು ಕಾಯಿಗಳನ್ನು ಎತ್ತಿ ತಮ್ಮ ಶಲ್ಯದೊಳಗೆ ಸುತ್ತಿಕೊಂಡು, ಧಡಧಡ ಮುಂದೆ ಹೋಯಿತು...ನೋಡಿದರೆ ಆತ ಗಿರಿಜಮ್ಮನ ಮನೆಯೊಳಗೆ ಸೀದಾ ನುಗ್ಗಿಬಿಡ್ತು, ಯಾರೂಂತೀರಿ ಆತ... ಗಿರಿಜಮ್ಮನ ತಂದೆ ಕಣ್ರೀ...ದಿನಾ ಆ ಪ್ರಾಣಿಗೆ ಇದೇ ಕೆಲಸ...ಬೆಳಗಿನ ಜಾವ ವಾಕಿಂಗು ಅನ್ನೋ ನೆಪದಲ್ಲಿ ಬೀದಿಬೀದಿಗಳೆಲ್ಲ ಸುತ್ತಿ, ಅಲ್ಲಿಲ್ಲಿ ಬಿದ್ದ ತೆಂಗಿನಕಾಯಿಗಳನ್ನೆಲ್ಲ ಕಲೆಕ್ಟ್ ಮಾಡತ್ತಂತ್ರೀ' ಅಂತ ಹಲ್ಲುಕಿರೀತ ಸುದ್ದಿ ಮುಟ್ಟಿಸಿದ್ದರು.

`ಏನ್ಮಾಡೋದ್ರೀ...ಕಾಯಿ ಕೀಳೋರೇ ಬರಲ್ಲ, ಬಂದ್ರೂ 200-300 ರೂಪಾಯಿ ಗಿಡಕ್ಕೆ, ಜೊತೆಗೊಂದು ಕಾಯಿ ಬೇರೆ. ಮರ ಬೀದೀಗೇ ವಾಲಿಕೊಂಡಿರೋದ್ರಿಂದ ನಮಗೆ ಕಾಯಿ ಸಿಗೋದು ಅಪರೂಪವೇ...ಕಾಯಿ ಬೆಲೆ ಬೇರೆ ತುಂಬ ತುಟ್ಟಿಯಾಗಿದೆ' ಎಂದು ಸುಂದರಮ್ಮ ಹೀಗೆ, ದೊಡ್ಡ ಉಪನ್ಯಾಸವನ್ನೇ ಕೊಡಲಾರಂಭಿಸುತ್ತಾರೆ. ಅದವರ ಮನದಾಳದ ಅಳಲು.

ಇಂಥ ಪರಿಸ್ಥಿತಿಯಲ್ಲಿ ಈ ಹುಡುಗ ಮೋರೀಲಿ ಬಿದ್ದಿದ್ದ ಕಾಯಿತಂದು ತಮಗೆ ಒಪ್ಪಿಸುತ್ತಿದ್ದಾನೆ ಎಂದವರ ಕಂಠ ತುಂಬಿಬಂತು. `ಅಯ್ಯೋ ಮುಂಡೇದೇ ನಿನಗೆಂಥ ನಿಯತ್ತೋ?!..ಹೂಂ ಉಳೀದೋರು ಇದ್ದಾರೆ' ಎಂದು, ಇದುವರೆಗೂ ತೆಂಗಿನಕಾಯಿ ಎತ್ತಿಕೊಂಡು ಹೋದೋರಿಗೆ ಶಾಪಹಾಕಿ ನೆಟಿಕೆಮುರಿದು, ಹುಡುಗನ ಪ್ರಾಮಾಣಿಕತೆಗೆ ಬೆರಗಾಗಿ ನಿಂತಿದ್ದರು!

`ಅಯ್ಯೋ ನನ್ನಪ್ಪ ನೂರ್ವರ್ಷ ಚೆನ್ನಾಗಿ ಬಾಳು...ಪರವಾಗಿಲ್ಲ ಈ ಸಣ್ಣವಯಸ್ಸಿನಲ್ಲೇ ಒಳ್ಳೆಯ ಗುಣಗಳನ್ನು ಬೆಳೆಸಿಕೊಂಡಿದ್ದೀಯಲ್ಲ, ತುಂಬ ಸಂತೋಷಾನಪ್ಪಾ' ಎಂದಾಕೆ ಕೃತಜ್ಞತೆ ಹಾಗೂ ಮಿತಿಮೀರಿದ ಆನಂದದಿಂದ ಉದ್ಗರಿಸಿ, ಒಳಬಾಗಿಲತ್ತ ತಿರುಗಿ, `ಏನೂಂದ್ರೆ, ಸ್ವಲ್ಪ ಇಲ್ಲಿ ಬರ್ತೀರಾ...ಬಂದು ನೋಡಿ' ಎಂದು ಒಳಗೆ ಮಲಗಿದ್ದ ಗಂಡನನ್ನು ಅವಸರವಸರವಾಗಿ ಕರೆದಾಗ ಆ ಹುಡುಗ ಪಿಳಿಪಿಳಿ ಕಣ್ಣುಬಿಡುತ್ತ ಮುಖದಲ್ಲಿ ಗೊಂದಲ ತುಳುಕಿಸಿದ.

ಕೆಲವೇ ನಿಮಿಷಗಳಲ್ಲಿ ಆಕೆಯ ಗಂಡ ಬಾಗಿಲಲ್ಲಿ ಕಾಣಿಸಿಕೊಂಡರು. `ನೋಡಿದರಾಂದ್ರೇ, ಇಷ್ಟು ಚಿಕ್ಕ ಹುಡುಗನಿಗೆ ಎಂಥಾ ನಿಯತ್ತು...ಮೋರಿಯಲ್ಲಿ ಬಿದ್ದಿದ್ದ ಕಾಯಿಯನ್ನು ತಂದು ಕೊಟ್ಟಿದ್ದಾನ್ರೀ'-ಸುಂದರಮ್ಮನ ಮುಖದಲ್ಲಿ ತುಳುಕುತ್ತಿದ್ದ ಕೃತಜ್ಞತೆ, ಆಕೆಯ ಗಂಡನ ಮೊಗದ ಮೇಲೂ ಮಿನುಗಿ `ಹೌದಾ...ಪಾಪ ಹುಡುಗನ್ನ ಒಳಗೆ ಕರೆದು ಏನಾದ್ರೂ ಕೊಡು ಮತ್ತೆ' ಎಂದು ಒಳನಡೆದರು.

`ಇಂಥ ತುಟ್ಟಿಕಾಲದಲ್ಲಿ ಕಾಯಿ ಅಂದ್ರೆ ಚೆನ್ನ ಇದ್ದಹಾಗೆ....ಒಂದು ಕಾಯಿಗೆ ಆ ಶೆಟ್ಟಿ ಇಪ್ಪತ್ತು ರೂಪಾಯಿ ಹೇಳ್ತಾನಲ್ಲ...ಅಂಥದ್ರಲ್ಲಿ ಬಿಟ್ಟಿ ಸಿಕ್ರೆ ಯಾವೋನು ಬಿಡ್ತಾನೆ ಹೇಳಿ...ಪಾಪ ಒಳ್ಳೆ ಹುಡುಗ, ಎತ್ತಿಕೊಂಡು ಓಡಿಹೋಗದೆ ತಂದುಕೊಟ್ಟಿದೆ...' ಎಂದು ಸ್ವಗತದಲ್ಲಿ ಖುಷಿಗೊಳ್ಳುತ್ತ ಆಕೆ ಆ ಹುಡುಗನನ್ನು ಕರೆತಂದು ಹಿಂದಿನ ಅಂಗಳದಲ್ಲಿ ಕೂರಿಸಿ ನಿಂಗಿಯ ಗಾಜಿನ ಲೋಟದಲ್ಲಿ ಬಿಸಿಬಿಸಿ ಕಾಫಿ ಸುರಿದು `ಕುಡಿಯಪ್ಪ ಕುಡಿ, ನಿನ್ನ ಹೊಟ್ಟೆ ತಣ್ಣಗಿರಲಿ '-ಎಂದು ಆ ಹುಡುಗನನ್ನು ಮನಸಾರೆ ಹರಸಿದರು. ಹುಡುಗ ಪೆದ್ದು ಕಳೆಯ ನೋಟದಲ್ಲಿ ಆಕೆಯನ್ನೇ ದಿಟ್ಟಿಸುತ್ತ ಕಾಫಿಯನ್ನು ಗಟಗಟ ಹೀರಿದ.

`ಸ್ವಲ್ಪ ಕೂತ್ಕೊಂಡಿರಪ್ಪ ಬಂದೆ' ಎನ್ನುತ್ತ ಆಕೆ ಒಳಗೆಹೋಗಿ, ಒಲೆಯ ಮೇಲೆ ಹೆಂಚಿಟ್ಟು, ಬಿಸಿಬಿಸಿ ದೋಸೆ ಹುಯ್ದು, ನಾಲ್ಕು ದೋಸೆ ಹುಡುಗನ ಮುಂದಿಟ್ಟಾಗ ಆಕೆಯ ಮೊಗದಲ್ಲೇನೋ ಸಂತೃಪ್ತಿಯ ಸೊಬಗು. ಹಾಗೇ ಕಟ್ಟೆಯ ಮೂಲೆಯಲ್ಲಿಟ್ಟಿದ್ದ ರಾತ್ರಿಯ ಅನ್ನ-ಸಾರಿನ ಪಾತ್ರೆ ತೆಗೆದು ಅವನ ಮುಂದಿಟ್ಟು, ಒಂದು ಮುತ್ತಗದೆಲೆ ಹಾಕಿ `ಊಟ ಮಾಡಪ್ಪ' ಎಂದಾಗ ಆ ಹುಡುಗನ ಮುಖದಲ್ಲಿ ಗಾಬರಿ-ಗಲಿಬಿಲಿ ಹೊಯ್ದಾಡಿತು. ದೋಸೆಯಿಂದ ಹೊಟ್ಟೆ ತುಂಬಿದ್ದರೂ ಆಕೆಯ ಬಲವಂತಕ್ಕೆ ಗಬಗಬನೆ ಹೊಟ್ಟೆ ಬಿರಿಯುವಷ್ಟು ಉಂಡು, ಹೊರಡಲು ಅವಸರವಸರವಾಗಿ ಮೇಲೆದ್ದು ನಿಂತ. ಸುಂದರಮ್ಮನ ಹೃದಯ ಕೃತಜ್ಞತೆಯ ಭಾರದಿಂದ ತುಂಬಿಬಂತು.

ಮುಂದಿನ ಪುಟ ನೋಡಿ ...

ಹುಡುಗ ಗೇಟಿನ ಬಳಿ ನಿಂತು `ಬರ್ತೀನಮ್ಮ' ಎಂದ ಕ್ಷೀಣವಾಗಿ. ಸುಂದರಮ್ಮ ತಮ್ಮ ಕೈಲಿದ್ದ ಹಳೆಯ ಪರಟನ್ನು ಅವನ ಮಡಿಲಿಗೆ ಹಾಕಿ ಜೊತೆಗೆ ಒಂದು ರೂಪಾಯಿಯ ಬಿಲ್ಲೆಯನ್ನು ಅವನ ಕೈಲಿಟ್ಟು `ಇನ್ನೂ ಹೀಗೇ ಯಾವತ್ತಾದ್ರೂ ಕಾಯಿ ಬಿದ್ದಿದ್ರೆ ತಂದ್ಕೊಡಪ್ಪ ಜಾಣ'-ಎಂದು ತುಂಬು ಹೃದಯದಿಂದ ಅವನನ್ನು ಬೀಳ್ಕೊಟ್ಟು ಬಾಗಿಲಾಚೆ ಹೋಗುತ್ತಿದ್ದ ಅವನನ್ನೇ ತದೇಕ ದೃಷ್ಟಿಯಿಂದ ದಿಟ್ಟಿಸಿದರು.

ಹುಡುಗ ಅಂಗೈಯಲ್ಲಿ ಬಿಗಿಯಾಗಿ ಹಿಡಿದಿದ್ದ ನಾಣ್ಯವನ್ನೊಮ್ಮೆ, ಕಂಕುಳಲ್ಲಿದ್ದ ಪರಟನ್ನೊಮ್ಮೆ ವಿಷಾದವಾಗಿ ಸವರಿದ. ಹಿಂತಿರುಗಿ ನೋಡಬೇಕೆಂದು ಅವನಿಗೆ ತೀವ್ರವಾಗಿ ಅನಿಸುತ್ತಿದ್ದರೂ ಸುಂದರಮ್ಮನವರ ಅವ್ಯಾಜ ಅಂತಃಕರಣದ ನೋಟವನ್ನೆದುರಿಸಲಾರದೆ ಕಣ್ತಗ್ಗಿಸಿ ಬಲವಂತವಾಗಿ ಅಲ್ಲಿಂದ ಹೆಜ್ಜೆಕಿತ್ತ. ಜಲಜಮ್ಮನ ಮನೆಯತ್ತ ಮೆಲ್ಲಗೆ ತಪ್ಪಿತಸ್ಥ ಭಾವದಿಂದ ಕಳ್ಳನೋಟ ಹರಿಸಿದವನು ಹೆಜ್ಜೆಯನ್ನು ಚುರುಕುಗೊಳಿಸಿದ. ಜಲಜಮ್ಮನ ಗುಡುಗಿನ ಧ್ವನಿ ಅವನನ್ನು ಬೆದರಿಸಿ ಚೆಡ್ಡಿ ಒದ್ದೆ ಮಾಡಿಕೊಳ್ಳುವಂತೆ ಮಾಡಿತ್ತು.

ಬೆಳಗಿನ ಜಾವ ಅವನು ಎಂದಿನಂತೆ ಕೈಲ್ಲಿ ಪ್ಲಾಸ್ಟಿಕ್ ಚೀಲಹಿಡಿದು ಹರಕು ಮುರುಕುಸಾಮಾನು ಮತ್ತು ಬೀದಿಗೆಸೆದ ಪ್ಲಾಸ್ಟಿಕ್ ಇತ್ಯಾದಿ ತ್ಯಾಜ್ಯವಸ್ತುಗಳನ್ನು ಆಯ್ದುಕೊಳ್ಳಲು ಬೀದಿಗುಂಟ ನಡೆದಿದ್ದ. ಅದೃಷ್ಟಕ್ಕೆ ಸುಂದರಮ್ಮನ ಮನೆಯ ಮೋರಿಯಲ್ಲಿ ಬಿದ್ದಿದ್ದ ದೊಡ್ಡ ತೆಂಗಿನಕಾಯಿ ನೋಡಿ ಅವನ ಸಂತಸ ಮೇರೆವರಿದಿತ್ತು. ಮನೆಮಂದಿಗೆಲ್ಲ ರಸಗವಳ ಎಂದು ಹಿಗ್ಗಿನಿಂದ ಮೆಲ್ಲಗೆ ಮೋರಿಗಿಳಿದು ಕಾಯಿ ಎತ್ತಿಕೊಂಡವನೆ ಇನ್ನೇನು ಓಟ ಕೀಳಬೇಕೆನ್ನುವಷ್ಟರಲ್ಲಿ ತಮ್ಮ ಮನೆಯಿಂದ ಹೊರಬಂದ ಜಲಜಮ್ಮನ ಹದ್ದಿನಕಣ್ಣು ಇದನ್ನು ಕಂಡುಬಿಟ್ಟಿತ್ತು.

`ಏಯ್ ಏನೋ ಅದು?...'-ಎಂದಾಕೆ ತಮ್ಮ ಮನೆಯ ಗೇಟಿನಿಂದಲೇ ಅಬ್ಬರಿಸಿದಾಗ ಹುಡುಗ ನಡುಗಿಹೋದ!...ಮೈಯೆಲ್ಲ ಬೆವರು ಕಿತ್ತುಕೊಂಡಿತ್ತು. ಬೆದರಿ `ಬೆ ಬೆ ಬ್ಬೆ' ಎಂದು ತೊದಲುತ್ತ ಭಯದಿಂದ ಅವರಿಗೆ ಕಾಯಿ ಕೊಡಲುಹೋದ. `ಹೋಗು ಅವರ್ಮನೆ ಬಾಗಿಲು ತಟ್ಟಿ, ಕೊಟ್ಟುಬಿಟ್ಟು ಬಾ ಹೋಗು...ನಾನಿಲ್ಲೇ ನೋಡ್ತಿರ್ತೀನಿ' ಎಂದು ಕಣ್ಣರಳಿಸಿ ಗುಟುರು ಹಾಕಿದಾಗ, ಹುಡುಗ ವಿಧೇಯವಾಗಿ ತಲೆಯಾಡಿಸಿ, ಆಕೆಯ ಹಿಡಿತದಿಂದ ತಪ್ಪಿಸಿಕೊಂಡರೆ ಸಾಕೆಂದು ತಟ್ಟನೆ ಅಲ್ಲಿಂದ ಜಾಗ ಖಾಲಿಮಾಡಿ ಓಡಿಹೋಗಿ ಸುಂದರಮ್ಮನವರ ಮನೆಯ ಗೇಟು ತೆರೆದಿದ್ದ.

ತಲೆಬಗ್ಗಿಸಿಕೊಂಡು ಮುಂದೆ ಸಾಗುತ್ತಿದ್ದ ಆ ಹುಡುಗನ ಎದೆಯನ್ನು ಅವ್ಯಕ್ತ ನಾಚಿಕೆ-ಸಂಕೋಚಗಳು ಗುದ್ದುತ್ತಿದ್ದವು. ▪



ವಿಜ್ಞಾನ

ಎಲೆಕ್ಟ್ರೋ ಮ್ಯಾಗ್ನೆಟ್

ಸಂಕಲನ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ:



- ದೊಡ್ಡದಾದ ಒಂದು ಕಬ್ಬಿಣದ ಮೊಳೆ
- ಒಂದು ಮೀಟರ್ ನಷ್ಟಿರುವ ಲೇಪಿತ ತಾಮ್ರದ ತಂತಿ (Insulated Copper Wire)
- ಬ್ಯಾಟರಿ, ಒಂದಷ್ಟು ಪೇಪರ್ ಕ್ಲಿಪ್ಸ್

ವಿಧಾನ:

- ಕಬ್ಬಿಣದ ಮೊಳೆಯ ಸುತ್ತ ತಾಮ್ರದ ತಂತಿಯನ್ನು ಸುತ್ತಿ.
- ತಂತಿಯ ಎರಡೂ ತುದಿಯ ಲೇಪನವನ್ನು ತೆಗೆದು ಅದನ್ನು ಬ್ಯಾಟರಿಗೆ ಸೇರಿಸಿ.
- ಈಗ ಮೊಳೆಯ ಹತ್ತಿರ ಪೇಪರ್ ಕ್ಲಿಪ್ಸ್ ತೆಗೆದುಕೊಂಡು ಹೋಗಿ. ಮೊಳೆಯು ಮ್ಯಾಗ್ನೆಟ್ ತರಹ ಪೇಪರ್ ಕ್ಲಿಪ್ಪನ್ನು ಆಕರ್ಷಿಸುತ್ತದೆ

ಏನಾಗುತ್ತಿದೆ:

ಬ್ಯಾಟರಿಯ ಎರಡೂ ದ್ರುವಗಳಿಗೆ ಸೇರಿಸಿರುವ ತಾಮ್ರದ ತಂತಿಯು ಒಂದು ವಿದ್ಯುತ್ ಜಾಲವನ್ನು ಪೂರ್ತಿಗೊಳಿಸುತ್ತದೆ. ವಿದ್ಯುಚ್ಛಕ್ತಿಯು ತಂತಿಗಳ ಮೂಲಕ ಹರಿಯುವಾಗ ಆಯಸ್ಕಾಂತೀಯ ಕ್ಷೇತ್ರವು ಉಂಟಾಗಿ, ಕಬ್ಬಿಣದ ಮೊಳೆಯು ಪೇಪರ್ ಕ್ಲಿಪ್ಸ್ ಗಳನ್ನು ಆಕರ್ಷಿಸುತ್ತದೆ. ಈ ರೀತಿ ವಿದ್ಯುತ್ ಪ್ರವಾಹದಿಂದುಂಟಾಗುವ ಆಯಸ್ಕಾಂತಕ್ಕೆ ಎಲೆಕ್ಟ್ರೋ ಮ್ಯಾಗ್ನೆಟಿಸಂ ಎಂದು ಕರೆಯುತ್ತಾರೆ.

ಇದರ ಅತಿ ಮುಖ್ಯ ಅನುಕೂಲತೆಯೆಂದರೆ, ನಮಗೆ ಯಾವಾಗ ಬೇಕೋ ಆಗ ವಿದ್ಯುತ್ ಹರಿಸಿ ಆಯಸ್ಕಾಂತೀಯ ಕ್ಷೇತ್ರವನ್ನು ಸೃಷ್ಟಿಸಬಹುದು.

ಈ ರೀತಿಯ ಎಲೆಕ್ಟ್ರೋ ಮ್ಯಾಗ್ನೆಟ್ಸ್ ಅನೇಕ ಕಡೆ ನಮ್ಮ ದೈನಂದಿನ ಬದುಕಿನಲ್ಲಿ ಕಾಣ ಸಿಗುತ್ತವೆ. ಎಲೆಕ್ಟ್ರಿಕ್ ಮೋಟಾರ್, ಧ್ವನಿವರ್ಧಕಗಳು, ಅನೇಕ ವೈಜ್ಞಾನಿಕ ಉಪಕರಣಗಳು, ಡೋರ್ ಬೆಲ್ಗಳು, ಕಂಪ್ಯೂಟರ್ ನ ಹಾರ್ಡ್ ಡಿಸ್ಕ್ ಗಳು ಇತ್ಯಾದಿ. ▪

ಜಾಣ ಕರ್ನಾಟಕ – ಉತ್ತರ

೧. ಆಲೂರು ವೆಂಕಟರಾಯರು.

೨. ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯ (ಬಿಎಂಶ್ರೀ)

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಹೋಳಿ ಹಬ್ಬ

ಮಾರ್ಚ್ ೧೨, 2016 ಬೆಳಿಗ್ಗೆ 11:00 ಕ್ಕೆ

Blacktown Showgrounds, Richmond Rd , Blacktown NSW 2148

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

www.holimela.com.au

ರಾಮನವಮಿ

ಏಪ್ರಿಲ್ ೧೬, 2016 ಬೆಳಿಗ್ಗೆ ೦೯:೩೦ ಕ್ಕೆ

Shri Shiv Mandir, 201, Eaglevale Raod, Minto

ಹೆಚ್ಚಿನ ಮಾಹಿತಿಗಾಗಿ ನೋಡಿ

http://www.friendsofindia.com.au/

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.